# ಅಪರಂಜಿ

ತಿಳಿನಗೆಯ ಕಾರಂಜಿ



ಜೂನ್ - 2011






ಬಿಡಿ ಪ್ರತಿ: ರೂ. 10.00

# ಅಪರಂಜಿ



ತಿಳಿನಗೆಯ ಕಾರಂಜಿ

**ಸಂಪಾದಕ ಮಂಡಳಿ**
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್
**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್
**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್



ಸಂಪುಟ 28
ಸಂಚಿಕೆ – 9
ಜೂನ್ – 2011

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಕೊನೆಗೂ ಸಂಭವಿಸಿದ ಭೇಟಿ | **ಆನಂದ** | 6 |
| ನಮ್ಮಂಜ ಪುಟ್ಟಪ್ಸಿ ಅವರ್ಮದ್ವಿ | **ಇ.ಆರ್. ರಾಮಚಂದ್ರನ್** | 8 |
| ಈಜಿಪ್ತಿಗೆ ನಿಯೋಗ | **ರಾಮಿ** | 11 |
| ತಾಳಲಾರೆನೋ ದೇವ.... | **ಅರುಂಧತಿ ಜೋಶಿ** | 13 |
| ತುಂತುರು | **ದಂನಾಳ** | 16 |
| ರವೂಲನೆಂಬುವ..... | **ವಾಣೀ ಸುರೇಶ್** | 17 |
| ನೀರಾ ರಾಡಿಯ ಕತೆ | **ನಾಗೇಶ ಹೆಗಡೆ** | 21 |
| ಗಾರ್ಡನ್‌ನಲ್ಲಿ ಒಂದು.... | **ಗುರು** | 25 |
| ದೇವ್ರ ದಿನಚರಿ | **ಮದ್ದೂಸದ್ನ** | 28 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 34 |
| ಮುನ್ಸೂಚನೆಯ ಬಿರುಗಾಳಿ | **ಇಸ್ಮಾಯಿಲ್** | 36 |

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: brmurthy@dataone.in

# ಅಪರಂಜಿ ಕಿಡಿ

● ಪ್ರಕಾಶ್



ಕರುಣಾನಿಧಿಯವರ ಮಗಳ ಹೆಸರನ್ನು ಉಚ್ಚರಿಸಲು ಸಿ.ಬಿ.ಐ.ನವರು ಒದ್ದಾಡುತ್ತಿದ್ದಾರಂತೆ.

★★★

''ಚಿನ್ನದ ಬೆಲೆ ಗಗನಕ್ಕೆ'' – ಪತ್ರಿಕೆ

**● ನಮಗಂತೂ ಅದು ಎಂದಿನಿಂದಲೂ ಗಗನ ಕುಸುಮ !!**

★★★

''ಕೇವಲ ಪದವಿಗಾಗಿ ಸಂಶೋಧನೆ ಬೇಡ'' – ಹೇಳಿಕೆ

**● ಈ ಬಗ್ಗೆ ಸಂಶೋಧನೆ ಅತ್ಯಗತ್ಯ !!**

★★★

''ತನಿಖೆಗೆ ಹೆದರಲ್ಲ''

**● ನ ಭಯಂ ನ ಲಜ್ಜಾ !!**

★★★

ಕ್ರಿಸ್ ಗೇಲ್ ಎಂಬ ಬಿರುಗಾಳಿಯಿಂದ

**● ವಿಜಯ ಮಲ್ಯ ಗಗನಕ್ಕೇರಿದರಂತೆ !!**

★★★

ಕುಲಾಂತರಿ ಧಾನ್ಯ ತಳಿ ಅನಿವಾರ್ಯ – ಹೇಳಿಕೆ

**● ಕನ್ನಡದಲ್ಲಿ ಹೇಳಿ ಸಾರ್ !!**

★★★

ಅಸಹ್ಯ ರಾಜಕೀಯ ಪರಿಸ್ಥಿತಿ – ಶ್ರೀ ದೇವೇಗೌಡ ಟೀಕೆ

**● ಕಾಲಾತೀತವಾದ ಹೇಳಿಕೆ ಅಂದರೆ ಇದೇ !!**

★★★

ಪರಭಾಷಿಕರಿಗೆ ಕನಡ್ನ ಕಲಿಸಿ – ಪತ್ರಿಕೆ


**● ನಮ್ಮವರ ಕನ್ನಡ ಮೊದಲು ಉತ್ತಮಗೊಳ್ಳಲಿ !!**

★★★

# ನಮ್ಮ ನಿಮ್ಮಲ್ಲಿ


**ಪು**ಸ್ತಕ ಬಿಡುಗಡೆ ಅನ್ನೋ ಮಾತು ಕೇಳಿದ ತಕ್ಷಣ ಅಮೆರಿಕಾದಲ್ಲಿರುವ ನನ್ನ ತಮ್ಮ ಹಾಗೂ ಇಂಗ್ಲೆಂಡಿನಲ್ಲಿರುವ ನನ್ನ ಮಗಳು ಇವರಿಬ್ಬರಿಗೂ ಸಿಕ್ಕಾಪಟ್ಟೆ ಕೋಪ ಬಂದುಬಿಡುತ್ತೆ. ಕೆನಡಾದ ಕಾಡುಗಳೆಲ್ಲಾ ನಿಮ್ಮ ಅಹಂಕಾರ ಪ್ರದರ್ಶನದ ಸಂಭ್ರಮದಲ್ಲಿ ಹಾಳಾದ್ವು. ಅಷ್ಟೊಂದು ಕಾಗದಾನ ವ್ಯರ್ಥವಾಗಿ ಬಳಸೋ ಬದ್ಲು ಅದೇನು ಹೇಳ್ಬೇಕೋ ಅದನ್ನೆಲ್ಲಾ ಒಂದು ಬ್ಲಾಗಿನಲ್ಲಿ ಬರೆದಿಟ್ಟುಬಿಟ್ಟರೆ ಚೆನ್ನ. ಕಣ್ಣು ಮರೆಯಾಗೂ ಇರುತ್ತೆ. ಕಾಗದಾನೂ ಉಳಿತಾಯ ಅನ್ನೋದು ಅವರಿಬ್ಬರ ಅಭಿಪ್ರಾಯ. ಅಪರಂಜೀನ ವೆಬ್ ಕಾಸ್ಟ್ ಮಾಡ್ತಿದೀವಿ ಇನ್ನು ಮೇಲೆ ನೀವೆಲ್ಲಾ ಅದನ್ನ ವೆಬ್‌ನಲ್ಲೇ ಓದಬಹುದು ಅಂತ ನನ್ನ ತಮ್ಮನಿಗೆ ಸುದ್ದಿ ತಿಳಿಸಿದಾಗ 'ಸಧ್ಯ, ಇನ್ನಾದರೂ ಬುದ್ಧಿ ಬಂತಲ್ಲ. ಮುದ್ರಣದ ಪ್ರತಿ ನಿಲ್ಲಿಸಿಬಿಡ್ತೀರಾ ತಾನೆ?' ಅಂತ ನನ್ನ ತಮ್ಮ ಕುಹಕವಾಡಿದ. ನಾನು ಹ,ಹ,ಹ ಅಂತ ದೇಶಾವಾರಿ ನಗೆ ನಕ್ಕು ಸುಮ್ಮನಾದೆ.

ಮೊನ್ನೆ ಮೇ ಹದಿನೈದರ ಬೆಳಗ್ಗೆ ನಮ್ಮ ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ ಏರ್ಪಡಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ರಾಜಗೋಪಾಲ್ ಮತ್ತು ನಾನು ಬಸವನಗುಡಿಗೆ ಹೋಗುತ್ತಿದ್ದಾಗ ಈ ಕೆನಡಾ ಕಾಡುಗಳ ಚಿತ್ರಣ ಮನದಲ್ಲಿ ಹಾದುಹೋಯಿತು. ಭೌಗೋಳಿಕ ನೆಲೆ ಬದಲಾದಂತೆ ನಮ್ಮ ದೃಷ್ಟಿಕೋನವೂ ಬದಲಾಗುವ ವಿಚಿತ್ರವನ್ನೇ ನೆನೆಯುತ್ತಾ ನಮ್ಮ ಸುಪರಿಚಿತ ವರ್ಲ್ಡ್ ಕಲ್ಚರ್ ಸಭಾಂಗಣವನ್ನು ತಲುಪಿದೆವು. ಅಷ್ಟು ಹೊತ್ತಿಗಾಗಲೇ ಅ.ರಾ. ಮಿತ್ರ, ಬೇಲೂರು ಬಂದುಬಿಟ್ಟಿದ್ದರು. ಮಿತ್ರರ ಸಮಯ ನಿಷ್ಠೆ ಎಂದಿಗೂ ಅನುಕರಿಸಬೇಕಾದ್ದೇ. ಗೆಳೆಯರೊಂದಿಗೆ ಲೋಕಾಭಿರಾಮವಾಗಿ ಮಾತುಕತೆಯಾಡುತ್ತಿದ್ದಂತೆ ಮೈಸೂರಿನಿಂದ ಪ್ರಭುಶಂಕರ್, ಕೃಷ್ಣೇಗೌಡ ಇವರೀರ್ವರೂ ಬಂದಿಳಿದರು. ನೋಡು ನೋಡುತ್ತಲೇ ಕನ್ನಡ ಹಾಸ್ಯ ಲೋಕದ ಎಲ್ಲ ಖ್ಯಾತನಾಮರು, ಅಷ್ಟೇನು ಖ್ಯಾತರಲ್ಲದ ನಾಮರು, ಒಟ್ಟಿನಲ್ಲಿ ಬಹುತೇಕ ಹಾಸ್ಯಾಸಕ್ತರಿಂದ ಉಪಹಾರ ಏರ್ಪಡಿಸಿದ್ದ ಸಭಾಂಗಣದ ಪಕ್ಕದ ಕಾರಿಡಾರ್ ತುಂಬಿತು.




ಅದು ಬಿಡುಗಡೆಯಾಗಲಿದ್ದ ಪುಸ್ತಕಗಳು, ಬೇಲೂರರು ಸಂಪಾದಿಸಿದ್ದ 'ಬೆಸ್ಟ್ ಆಫ್ ಅ.ರಾ. ಮಿತ್ರ' ಹಾಗೂ 'ಬೆಸ್ಟ್ ಆಫ್ ಪ್ರಭುಶಂಕರ್' ಮತ್ತು ಅ.ರಾ. ಮಿತ್ರ ಅವರು ಕೈಲಾಸಂ ಅವರನ್ನು ಕುರಿತು ಬರೆದಿರುವ 'ಕೈಲಾಸಂ ಬದುಕು ಬರಹ'

ಪುಸ್ತಕದ ಮರುಮುದ್ರಣ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರಿಂದ ಪುಸ್ತಕಗಳು ಬಿಡುಗಡೆಯಾದವು. ಬಿಡುಗಡೆ ಮಾಡಿದ ನಂತರ ಮಾತನಾಡಿದ ಕೃಷ್ಣಯ್ಯನವರು ಅ.ರಾ. ಮಿತ್ರರ ಸಾಹಿತ್ಯ ವಕ್ರಕನ್ನಡಿಯ ದರ್ಶನ ಎಂದು ಗುರುತಿಸಿದರು. ಮಿತ್ರರ ಸಾಹಿತ್ಯ ಕೇವಲ ನಗೆ ಸಾಹಿತ್ಯವಲ್ಲ, ಸೂಕ್ಷ್ಮವಾಗಿ ಅವಲೋಕಿಸಿದರೆ ಅದರಲ್ಲಿ ಒಂದು ವಿಷಾದದ ಸೆಲೆಯನ್ನು ಕಾಣಬಹುದು. ಸಂಗ್ರಹವಾಗಿ ಹೇಳುವುದಾದರೆ 'ದೇವರಿಗಿಂತ ಬದುಕು ದೊಡ್ಡದು. ಸಾಯದೇ ಬೇಯುವ ಬದುಕುವ ಮನುಷ್ಯ ದೊಡ್ಡವನು. ಪೂಜೆಗಿಂತ ನೆರವುಗೈನ ಚಾಚು ದೊಡ್ಡದು' ಎಂಬುದನ್ನು ಮಿತ್ರರ ಸಾಹಿತ್ಯ ಬಿಂಬಿಸುತ್ತದೆ ಎಂದರು. ಮಿತ್ರರ ಪ್ರಬಂಧಗಳನ್ನು ಓದಿದಾಗ ಜೀವನದ ಬಗ್ಗೆ ವಿಸ್ಮಯ ಆಗುವುದಿದ್ದರೆ ಅದು ಮನುಷ್ಯನ ಅನಂತ ಅವತಾರಗಳ ಬಗ್ಗೆ, ವಿವಿಧ ಮುಖವಾಡಗಳ ಬಗ್ಗೆ ಎಂಬುದರ ಅರಿವು ಮೂಡುತ್ತದೆ. ಇವರ ಕೃತಿಗಳು ಬದುಕಿನ ಬಗ್ಗೆ ತೀವ್ರ ಕಾಳಜಿಯನ್ನು, ಗಟ್ಟಿ ವಾಸ್ತವಿಕತೆಯನ್ನು ಬಿಂಬಿಸುವ ಸಾಹಿತ್ಯ ಪ್ರಕಾರ ಎಂದು ಅಭಿಪ್ರಾಯಪಟ್ಟರು. ಪ್ರಭುಶಂಕರರ ಸಂಕಲನವನ್ನು ಕುರಿತು ಮಾತನಾಡುತ್ತಾ, ಮಾನ್ಯ ಲೇಖಕರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೈಯ್ಯಾಡಿಸಿರುವುದರಿಂದ ಇವರ ಸಾಹಿತ್ಯದಲ್ಲಿ ಅತ್ಯುತ್ತಮ ಎಂದು ಆಯ್ಕೆಮಾಡುವ ಕೆಲಸ ಸುಲಭವಲ್ಲ. ನಗೆಪ್ರಬಂಧಗಳ ಜೊತೆಗೆ ಇವರು ಬರೆದಿರುವ ಇತರ ಪ್ರಕಾರಗಳನ್ನೂ ಗಮನಿಸಿದರೆ ಇವರ ಸಾಹಿತ್ಯ ರಚನೆಯ ವಿಸ್ತಾರವಾದ ಹರಹು ತಿಳಿಯುತ್ತದೆ. ಅಮೆರಿಕೆಯಲ್ಲಿ ಒಮ್ಮೆ ಪ್ರಭುಶಂಕರರು ಮಾಡಲು ಯತ್ನಿಸಿದ್ದ ಸೈಕಲ್ ಸವಾರಿಯನ್ನು ಕುರಿತು ಬರೆದಿರುವ ಪ್ರಬಂಧ ನಿಜಕ್ಕೂ ಸದಾ ನೆನಪಿನಲ್ಲಿ ಉಳಿಯುವಂತಹುದು ಎಂದು ಕೃಷ್ಣಯ್ಯ ಹೇಳಿದರು.




ಇವರ ನಂತರ ಮಾತನಾಡಿದ ಅ.ರಾ.ಮಿತ್ರ ತಮ್ಮ ವಿದ್ಯಾರ್ಥಿ ದಿನಗಳನ್ನು ನೆನೆಯುತ್ತಾ 'ಪ್ರಭುಶಂಕರರು ನನಗೆ ಕೇವಲ ಗುರುಗಳಾಗಿರಲಿಲ್ಲ, ಅವರು ನನ್ನ ಬದುಕನ್ನು ತಿದ್ದಿದರು. ಕಷ್ಟದಲ್ಲಿ ನನ್ನ ನೆರವಿಗೆ ಬಂದರು. ಅವರಿಂದ ಜೀವನದ ಬಗ್ಗೆ ನಾನು ಕಲಿತದ್ದು ಅಪಾರ' ಎಂದು ಹೇಳಿ, ಹಾಸ್ಯಕ್ಕೆ ತನ್ನದೇ ಆದ ಒಂದು ಪರಿಪೂರ್ಣ ವ್ಯಕ್ತಿತ್ವವಿದೆ. ನಾವೆಲ್ಲರೂ ಬೆಳೆಯಿಸಿಕೊಳ್ಳಬೇಕಾದ ವ್ಯಕ್ತಿತ್ವ ಅದು ಎಂದು ಹೇಳಿದರು.

ಪ್ರಭುಶಂಕರರು ತಮ್ಮ ಮಾತಿನಲ್ಲಿ, ತಾವು ಕುವೆಂಪು ಅವರೊಂದಿಗೆ ಕಳೆದ ಸುಮಾರು ಅರುವತ್ತು ವರುಷಗಳು ತಮ್ಮ ಜೀವಿತಾವಧಿಯ ಅತ್ಯುತ್ತಮ ದಿನಗಳು ಎಂದು ನೆನಪಿಸಿಕೊಂಡು




**ವೈ.ವಿ. ಗುಂಡೂರಾವ್, ಬೇಲೂರು, ಎಂ.ಎಚ್. ಕೃಷ್ಣಯ್ಯ, ಎಂ. ಕೃಷ್ಣೇಗೌಡ, ಎಂ.ಎಸ್. ನರಸಿಂಹಮೂರ್ತಿ, ಪ್ರಭುಶಂಕರ, ಅ.ರಾ. ಮಿತ್ರ**

ತಾವು ತಮ್ಮ ಗುರುಗಳಾದ ನಾ. ಕಸ್ತೂರಿಯವರಿಂದ ಕಲಿತ ಮೊನಚು ಹಾಸ್ಯದ ವಿವರಗಳನ್ನು ಸಭೆಗೆ ತಿಳಿಸಿ ಸಭಿಕರನ್ನು ನಗಿಸಿದರು.

ಪ್ರೊಫೆಸರ್ ಕೃಷ್ಣೇಗೌಡರು ತಮ್ಮ ಭಾಷಣದಲ್ಲಿ, ಮಿತ್ರ ಹಾಗೂ ಪ್ರಭುಶಂಕರ ಇವರಿಬ್ಬರನ್ನೂ ಗುರುಗಳ ಸ್ಥಾನದಲ್ಲಿ ಕಾಣುವ ಸೌಭಾಗ್ಯ ತಮಗೆ ದೊರೆತದ್ದು ತಮ್ಮ ಸಾರ್ಥಕ ಅನುಭವ ಎಂದು ಹೇಳಿ, ತಮ್ಮ ಶ್ರೀಮಂತ ಸಾಹಿತ್ಯ ಜೀವನದ ಹಲವು ರಸನಿಮಿಷಗಳನ್ನು ಸಭಿಕರೊಂದಿಗೆ ಹಂಚಿಕೊಂಡರು.

ಸಮಾರಂಭ ತುಂಬಾ ಚೆನ್ನಾಗಿ ನಡೆಯಿತು. ತುಂಬಾ ಭಾಷಣಕಾರರು ಇದ್ದದ್ದರಿಂದ, ಮಧ್ಯೆ ಹಲವು ಸ್ಕಿಟ್‌ಗಳ ಜೋಡಣೆ ಮಾಡಿದ್ದರಿಂದ ಸಮಾರಂಭ ಮುಗಿದಾಗ ಮಧ್ಯಾಹ್ನ ಎರಡೂವರೆ ಆಗುತ್ತಾ ಬಂದಿತ್ತು. ಬೆಳಗಿನ ಉಪಹಾರ ಪುಷ್ಕಳವಾಗಿ ಇದ್ದದ್ದರಿಂದ ಕೇಳುಗರಿಗೆ ಅಷ್ಟೇನೂ ಅನಾನುಕೂಲವಾಗಿಲ್ಲದಿರಬಹುದು. ನಾನು ಗಮನಿಸಿದ ಒಂದು ತಮಾಷೆ ವಿಷಯ ಅಂದರೆ ಇಂತಹ ಒಳ್ಳೆಯ ಸಾಹಿತ್ಯ ಸಮಾರಂಭಕ್ಕೆ ಬಂದ ಸಾಹಿತಿಗಳೆಲ್ಲಾ ಹಾಸ್ಯ ಸಾಹಿತ್ಯ, ಲಲಿತ ಪ್ರಬಂಧ ಇವುಗಳಲ್ಲಿ ಕೈಯ್ಯಾಡಿಸಿದವರೇ. ಗಂಭೀರ ಚಿಂತನೆಯ ಸಾಹಿತ್ಯ ಪ್ರಕಾರಗಳನ್ನು ಕೃಷಿಮಾಡುವ ಯಾವ ಕೃಷಿಕನೂ ಕಣ್ಣಿಗೆ ಬೀಳಲಿಲ್ಲ, ಕನ್ನಡ ಸಾಹಿತ್ಯ ಆರೋಗ್ಯಕರ ಬೆಳವಣಿಗೆಯನ್ನು ಸಾಧಿಸಬೇಕಾದರೆ ಹಾಸ್ಯಪ್ರಜ್ಞೆ, ಸಹೃದಯತೆ, ಇತರ ಪ್ರಕಾರಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಕುತೂಹಲ ಈ ಗುಣಗಳು ಎಲ್ಲ ವೃತ್ತಿನಿರತ ಸಾಹಿತಿಗಳಿಗೂ ಅಗತ್ಯ ಅನ್ನಿಸುತ್ತದೆ ನನಗೆ.

**ಶಿವಕುಮಾರ್**

# ಕೊನೆಗೂ ಸಂಭವಿಸಿದ ಭೇಟಿ

**- ಆನಂದ**

**ಐ**ಚ್ಚೆನ್ ಸಾಯಿಬಾಬ ಸ್ವರ್ಗದಲ್ಲಿ ಮುಖಾಮುಖಿ ಆದಾಗ....

ಎಂದಿನಂತೆ ತಮ್ಮ ಬೆಳಗಿನ ವಾಕಿಂಗ್ ಮುಗಿಸಿ ಬಂದ ಎಚ್ಚೆನ್ ತಮ್ಮ ರೂಮಿಗೆ ಹೋಗುತ್ತಿದ್ದಾಗ ಪ್ರವೇಶ ದ್ವಾರದಲ್ಲಿ ಏನೋ ಗದ್ದಲವಾದಂತೆ ತೋರಿತು. ಅದರತ್ತ ಗಮನ ಹರಿಸಿದಾಗ ಯಾರೋ ಹೊಸಬರ ಪ್ರವೇಶವಾಗುತ್ತಿತ್ತು. ಪರಿಚಿತ ಮುಖ ಎನಿಸಿತು ಎಚ್ಚೆನ್ ಅವರಿಗೆ. ಕಾವಿ ಗೌನು. ತಲೆ ತುಂಬಾ ಕೂದಲು. ಅರೆ! ಇವರು ಸಾಯಿಬಾಬ. ಹೌದು. ಪುಟ್ಟಪರ್ತಿಯ ದೇವಮಾನವ. ವಯಸ್ಸಾದವರಂತೆ, ದಣಿದವರಂತೆ ಕಂಡರು.

ಅರೆ ಅವರು 10 ವರ್ಷಗಳ ನಂತರ ಬರಬೇಕಿತ್ತಲ್ಲವೆ? ಇದೇನು ಇಷ್ಟು ಬೇಗ? ಅದಿರಲಿ ಈಗವರು ನನ್ನ ಸ್ನೇಹಿತರೋ ಅಲ್ಲವೋ? ಛೆ! ಸ್ವರ್ಗದಲ್ಲಿ ಶತ್ರು ಸ್ನೇಹಿತ ಎಂಬ ಮಾತೆ? ಎಚ್ಚೆನ್‌ರಿಗೆ ನಗು ಬಂದಿತು. ಇಲ್ಲಿ ಎಲ್ಲರೂ ಸಮಾನರು ತಾನೆ?

ಎಚ್ಚೆನ್ ಅವರನ್ನು ಸ್ವಾಗತಿಸಲು ಹೋದರು.

'ರಾಂಡಿ, ರಾಂಡಿ' ಎಂದು ಮಾತೃಭಾಷೆಯಲ್ಲೇ ಸ್ವಾಗತಿಸಿದರು ಅವರ ಎರಡೂ ಕೈಗಳನ್ನು ಹಿಡಿದು.

'ಓ! ನೀವು ಇಲ್ಲಿದ್ದೀರಿ' ಎಂದು ಹೇಳುತ್ತಾ ಬಾಬ ಒಳಗೆ ಕಾಲಿಟ್ಟರು. ಸುದ್ದಿ ಈಗಾಗಲೇ ಹರಡಿದ್ದರಿಂದ ಅವರ ಭೂಲೋಕದ ಭಕ್ತರು ಅವರನ್ನು ದರ್ಶನ ಮಾಡಲು ನೆರೆದಿದ್ದರು.

'ನೀವು ಇನ್ನೂ ಲೇಟಾಗಿ ಬರುತ್ತೀರಿ ಎಂದುಕೊಂಡಿದ್ದೆ' ಎಂದರು ಎಚ್ಚೆನ್.

'ನಾನೂ ಹಾಗೇ ಅಂದುಕೊಂಡಿದ್ದೆ. ಇನ್ನೂ 10 ವರ್ಷಗಳ ಕಾಲ ಇರುವೆನೆಂದುಕೊಂಡಿದ್ದೆ ಆದರೆ ಇಲ್ಲಿಂದ ಬುಲಾವ್ ಬಂದಿತು. ಕಾರಣ ಗೊತ್ತಾಗಲಿಲ್ಲ' ಎಂದು ಬಾಬ ಹೇಳಿದರು.

'ನನ್ನದೂ ಅದೇ ಕತೆ. ನನಗೂ ಮಾಡಲು ಬೇಕಾದಷ್ಟು ಕೆಲಸವಿತ್ತು. ಆದರೆ ಬೇಗನೇ ಔಟಾದೆ' ಎಂದರು ಎಚ್ಚೆನ್.

'ಹೇಗಿದೆ ಬದುಕು ಇಲ್ಲಿ?' ಕಾವಿಬಾಬ ಕೇಳಿದರು.

'ಮಾಡಲು ಏನೂ ಕೆಲಸವಿಲ್ಲ. ಭೂಮಿಯ ಮೇಲಾದರೋ ತುಂಬಾ ಬ್ಯುಸಿ ಆಗಿ ಇರುತ್ತಿದ್ದೆ. ಈಗ ಸ್ನೇಹಿತರೊಡನೆ ಮಾತು ಹರಟೆ. ಬದುಕು ಈಗ ಅಲ್ಲಿ ಹೇಗಿರಬಹುದು ಎಂಬುದರ ಬಗ್ಗೆ ಚಿಂತನೆ. ಹೀಗೇ ಹೊತ್ತು ಕಳೆಯುವೆ' ಎಂದರು ಖಾದಿಬಾಬ. ಅವರಿಗೆ ಬೋರ್ ಆಗಿದೆ ಎಂದು ಅವರ ದನಿಯಲ್ಲೇ ತಿಳಿಯುತ್ತಿತ್ತು.

'ನನ್ನದೂ ಇದೇ ಕತೆ ಆಗಬಹುದೆ?' ಎಂದು ಆತಂಕದಿಂದ ಕೇಳಿದರು ಸಾಯಿಬಾಬ

'ನಿಮ್ಮ ವಿಷಯ ತಿಳಿಯದು' ಎಂದರು ಎಚ್ಚೆನ್. ಯಾರಿಗೆ ಗೊತ್ತು? ಇಲ್ಲಿ ಎಲ್ಲರೂ ಸಮಾನರು ಎಂದಿದ್ದರೂ ಕೆಲವರು ಹೆಚ್ಚಿನ ಸಮಾನರು ಇರಬಹುದು.

'ಬಾಬ, ಹೇಳಿ ನೀವೇಕೆ ನನಗೆ ಕುಂಬಳಕಾಯಿ ಬರಿಸಲಿಲ್ಲ? ನಾನೆಷ್ಟು ಕೇಳಿದೆ?' ಎಂದರು ಎಚ್ಚೆನ್. ಬಾಬ ಅವರ ಪವಾಡಗಳನ್ನು ಎಚ್ಚೆನ್ ಮರೆತಿರಲಿಲ್ಲ. ಈಗಲಾದರೂ ಪವಾಡಗಳ ಹಿಂದಿನ ರಹಸ್ಯ ಬಾಬ ಬಯಲು ಮಾಡುವರೆ? ಎಂಬ ಕುತೂಹಲ ಎಚ್ಚೆನ್ ಅವರಿಗೆ.

ಉತ್ತರಕ್ಕಾಗಿ ಸಡಗರ, ಕುತೂಹಲದಿಂದ ಕಾಯ್ದರು.

'ಓ! ಆ ರಹಸ್ಯ ನನ್ನ ಬಳಿಯೇ ಉಳಿಯಲಿ ಬಿಡಿ. ಈಗ ಅದನ್ನು ಹೇಳಿದರೆ ಪ್ರಯೋಜನವೇನಾದರೂ ಏನು? ಮಾಧ್ಯಮದವರು ಇಲ್ಲಿ ಇಲ್ಲ. ಅದಿರಲಿ ನನ್ನದೊಂದು ಪ್ರಶ್ನೆ ನಿಮಗೆ ಈಗ..'

'ಏನು ಬಾಬ?' ಎಚ್ಚೆನ್ ಕುತೂಹಲದಿಂದ ಕೇಳಿದರು.

'ನಾನು ಕುಂಬಳಕಾಯಿ ಬರಿಸಿ ಕೊಟ್ಟಿದ್ದರೆ ನೀವೇನು ಮಾಡುತ್ತಿದ್ದಿರಿ ಅದರಿಂದ?'

'ಓ! ನಮ್ಮ ಹಾಸ್ಟೆಲ್ ಅಡಿಗೆಯವನಿಗೆ ಹೇಳಿ ಮಜ್ಜಿಗೆ ಹುಳಿ, ಸಾಂಬಾರ್ ಅಥವಾ ದಂರೋಟ್ ಮಾಡಿಸುತ್ತಿದ್ದೆ' ಎಂದರು.

ಅದನ್ನು ಕೇಳಿ ಬಾಬ ಜೋರಾಗಿ ನಗತೊಡಗಿದರು.

ಎಷ್ಟು ಜೋರಾಗಿ ಎಂದರೆ ನನಗೆ ಎಚ್ಚರವಾಯಿತು. ✵

---




**ಅಣ್ಣಾ,** ಮಾಮೂಲು ಕೊಡದೇ ಹೋದರೆ

ಇಲ್ಲಿಗೆ **ಹಜಾರ್** ಸಲ ಬಂದು ಹೋಗಬೇಕಾಗಿ ಬರುತ್ತೆ, ತಿಳಿಕೊ.

# ನಮ್ನಂಜ ಪುಟ್ಬಸ್ವಿ ಅವರ್ಮದ್ವಿ

**- ಇ.ಆರ್. ರಾಮಚಂದ್ರನ್**

**ನ**ಮ್ ಉಡ್ಗ ನಂಜ ಊರ್ನಿಂದ ಬಂದವ್ನೇ 'ನನ್ಗೆ ಪುಟ್ಬಸ್ವೀನ ಕೊಟ್ಟು ಬರೋ ಭಾನ್ವಾರ ಮದ್ವೀ ಮಾಡಿ' ಅಂತ ಅಠ ಹಿಡ್ದು ಕುಂತ್ಕೊಂಡ್ಬಿಟ್ಟ.

ಎಲ್ಡು ವರ್ಷದಿಂದ ನನ್ಗೆ 'ಈಗಲೇ ಮದ್ವಿ ಬೇಡಾ' ಅಂತ ಅಠ ಮಾಡ್ಕೊಂಡ್ ಕೂತಿದ್ದ ನಂಜ.

'ಎಲಾ ಇವ್ನ! ಈಟು ವರ್ಸ ಮುದ್ಕಿ ದಿನಾ ಬಡ್ಕೊಂಡ್ರೂ ಕಿವೀಗಾಕೋಳ್ದೇ ಇನ್ನೇನ್ ಅವಳು ಈಗ್ಲೋ ಆಗ್ಲೋ 'ಗೊಟಕ್' ಅಂತಾಳೋ ಅಂದ್ಕೊಳೋತ್ತಿಗೆ ಈಗ್ಲೇ ಮದ್ವಿ ಮಾಡೀ ಅಂತ ಕುಣಿತವ್ನೆ.... ಏನಾಗಿದೇ ಇವನ್ಗೇ..' ಅಂತ ಯೋಚ್ನೆ ಮಾಡ್ತಿರ್ವಾಗ.....

......ನನ್ ಎಂಡ್ರು ಉಡ್ಗನ್ನ ಜೊತ್ಯಾಗ 'ಗುಸ್-ಪುಸ್' ಮಾಡಿ ಅತ್ಕೊಂಡ್ ಬಂದ್ಲು. ಈಟು ವರ್ಸ ಕಣ್ಣಾಗೆ ಒಂದು ತೊಟ್ಟ್ ನೀರ್ಹಾಕ್ಕಿಲ್ಲ. ಆಗೆ ಏನು ಏಳ್ಬಿಟ್ಟಾ ನನ್ಮಗಾ ಅಂತ ಬೆಲ್ಟು ಕಟ್ಕೊಂಡೆ.

> **ಟೀವೀನಾಗ ಇಲಾಯ್ತಿ ರಾಜ-ರಾಣಿ ಮದ್ವಿ ನೋಡ್ದ ಮೇಲೆ ನಮ್ ಉಡ್ಗ ನಂಜಂಗೆ ಈ ಐಡಿಯಾ ಬರೋದೆ?**

'ಯಾಕ್ಲೆ.... ಕಣ್ಣಾಗೆ ನೀರ್ ಸುರಿಸ್ತೀ? ಏನ್ ಏಳ್ಬಿಟ್ಟಾ ನಿನ್ಮಗಾ?'

'ನೀನೇ ಓಗ್ ಕೇಳ್ಕೋ! ನನೊಟ್ಟೇಲಿ ಆಲ್ ಬದ್ಲು ವಿಷಾ ಸುರುದವ್ನೇ' ಅಂತ ಅತ್ಕೊಂಡೇ ಓದ್ಲು.

ನಾನೇ ಓಗಿ ಒಂದ್ಕಿತ ನೋಡುವಾ ಅಂತ ನನ್ ಪಂಚೇಗಾಕಿದ್ ಬೆಲ್ಟ್ನ ಮುಟ್ಕೊಂಡ್ ಅವನ್ತಾಕೆ ಓದೆ.

ನಂಜ ನನ್ ನೋಡಿ ಮೂತಿ ಸಿಂಡ್ರಿಸ್ಕೊಂಡ.

'ಯಾಕ್ಲೇ ನಿನ್ನ ಅವ್ವನ್ ಅಳಿಸಿದ್ದು? ತಲೇ ಸರಿಯಾಗೈತಾ ನಿನ್ಗೆ.... ಏನೇಳ್ದೆ ಅವಳ್ಗೆ.... ನನ್ಗೂ ವಸೀ ಏಳು ಅದೇನ್ಕೇಳೂವ' ಅಂದೆ.

'ನಾನೇಳಿದ್ ಇಷ್ಟೆ ...' ನನ್ಗೆ ಮದ್ವೇ ಚರ್ಚನಲ್ಮಾಡಿ. ನಾನೂ ಪುಟ್ಬಸ್ವೀ ಉಂಗ್ರ ಬದ್ಲಾಯಿಸ್ಕೊಂಡ್ ಮದ್ವೆ ಆಯ್ತೀವಿ' ಅದ್ಕೇಳಿದಕ್ಕೆ ಅತ್ಕೋಂಡ್ ಓಡುದ್ಳು.'

'ನಿನ್ಗೇನ್ ಉಚ್ಚು-ಗಿಚ್ಚು' ಇಡ್ಕೈತಾ? ಚರ್ಚಂತೆ ಚರ್ಚ್! ನಿನ್ನ ಕಣ್ಣೆದ್ರೇ ತಲೆ ಚಚ್ಚುಬಿಡ್ತಿನಿ ನೋಡ್ಕೋ! ನಮ್ ನೊಣವಿನಕೆರೆ, ಪುಲಿಕಲ್ಲಲ್ಲಿ ರಥದ್ದಿನ ಇಲ್ಲಾ ಮಾರಮ್ಮ್ನ ಜಾತ್ರೇಲಿ ಕೋಳಿ ರಕ್ತ ಹರ್ಸೇ ನಿನ್ ಮದ್ವೆ ಮಾಡ್ತೀನಿ. ಏನೋ ಪ್ಯಾಟೆಗ್ ಓಗ್ ವಸಿ ಓದ್ಕೊಂಡ್ ಬರ್ಲಿ ಅಂತ ಕಳ್ಸಿದ್ದೇ ತಪ್ಪಾಯ್ತು! ಇನ್ನೊಂದು ಕಿತಾ ನನ್ಮುಂದ್ ಈ ಮಾತ್ತಗ್ದಿ, ಚರ್ಮ ಸುಲ್ದುಬಿಡ್ತಿನಿ, ಉಸಾರ್!' ಎಂದು ಹೇಳಿ ಬೆಲ್ಟ್ ಮುಟ್ಕೊಂಡೇ ಒರಗ್ ಬಂದೆ.

ಸಂಜೆ ಹೊತ್ತಿಗೆ ಮನೇಲೊಂದ್ ಸದ್ದಿಲ್ಲ; ಯಾರೂ ಮುದ್ದೆ ಮುಟ್ಲಿಲ್ಲ.



ನನ್ನವ್ವ ಉಡಗನ್ ತಾವ ಓಗಿ ಬಾಳ ಒತ್ತ್ ಕುಂತಿತ್ತು. ಅವ್ಳ ಜೊತೆ ನನ್ಮಗ್ಳೂ ಯೆಲ್ಲಮ್ಮನು ಇದ್ಲು. ಮುದ್ಕಿ ಸಂತೋಸ್ವಾಗೆ ಒರಗ್ಬಂತು. ಯೆಲ್ಲೀನು ಕುಣೇತಾನೆ ಬಂದ್ಲು ಜತ್ಗೆ.

ರಾತ್ರಿ ನನ್ಗೆ ನನ್ನಾಕೀಗೆ ನಿದ್ದಿಲ್ಲ.

ವತ್ತಾರೆ ಮುದ್ಕಿ ಕೈಲಿ ಕಾಪಿ ಇಡ್ಕೊಂಡ್ ಬಂತು. ಜೊತೆ ಯೆಲ್ಲೀನೂ ಇದ್ಲು.

'ನಿನ್ಗೆ ಏನ್ ಯೇಳ್ದಾ ಮೊಮ್ಮೊಗಾ..... ಅವನ್ ತಲೆನೆಟ್ಗಿಲ್ಲ.....'

'ಅವನ್ ಯೇಳಿದ್ದಪ್ಪೇನಿಲ್ಲ ಬಿಡು..'

'ಏಯ್! ನಿನ್ತಲೇನೂ ಕೆಡಸವ್ನೆ.'

'ಅವ್ನು ಟೀವೀನಾಗ ಇಲಾಯ್ತಿ ರಾಜ-ರಾಣಿ ಮದ್ವಿ ನೋಡವ್ನೆ... ಪುಟ್ಬಸ್ವಿ ಇಂದ್ಗಡೆ ದೊಡ್ಬಿಳಿಬಟ್ಟೆ ಆಕ್ಕೊಂಡ್ ಬರ್ಬೇಕು; ನಾವ್ಗಂಗ್ರೆಲ್ಲ ಟೋಪಿ ಆಕ್ಕೊಂಡ್ ಕುಣೀ ಬೇಕು.. ಎಲ್ಲಾರೆದ್ರು ಪುಡ್ಬಸ್ವಿನಾ ಕೂಡ್ಕೋಬೇಕು ಅಂತ ಆಸೆ ಅವನ್ಗೆ.'

'ಥೂ! ಎಲ್ಲಾರೆದ್ರು ಕೂಡ್ಕೋಬೇಕು ಅಂದ್ನಾ?'

'ಅಪ್ಪಯ್ಯ... ಕೂಡ್ಕೋಬೇಕು ಅಂದ್ರೆ.., ನಿಂಗ್ ಹ್ಯಾಗ್ಹೇಳ್ಳಿ.., ಬರೀ ಮುತ್ಕೊಡೋದಷ್ಟೆ! ಬೇರೆ ಏನಿಲ್ಲ.'

ಇದು ಯೆಲ್ಲಮ್ಮಂದು ಶಿಫಾರ್ಸಿ..

'ಬಿಳೀಬಟ್ಟೆ ಏನದು?'

'ನಮ್ಮ್ ಸಿದ್ದೋಜಿಗ್ಯೇಳ್ದ್ರೆ 5 ಮೀಟರ್ ಲಾಂಗ್ಕಾಕ್ಲತ್ನಾಗೆ ಸೀರೇಗೆ ಸೇರ್ಸಿ ಒಲ್ಕೊಡ್ತಾನೆ. ಪುಟ್ಬಸ್ವಿ ಅದನ್ನು ಆಕ್ಕೊಂಡು ಓಡಾಡ್ಬೇಕು ಅಷ್ಟೆ'

‘ಬಿದ್ಬುಡಾಕಿಲ್ವ? ನೆಲದ್ಮೇಲೆ ಓದ್ರೆ ಕಸಾ ಗುಡ್ಸೋಆಗೆ ಆಗ್ತದಲ್ಲಾ ಯೆಲ್ಲೀ’

‘ಆಪ್ಪಯ್ಯ! ನಾನವ್ಪಿಂದೆ ಬಿಳಿಬಟ್ಟೆನಾ ಕೈಲಿ ಇಡ್ಕೊಂಡ್ ಓಯ್ತೀನಿ. ನಮ್ಗೆ ತಲೀಮೇಲೆ ಆಕೋದಕ್ ಟೋಪಿಬೇಕು. ಅದ್ನೀ ತೆಕ್ಕೊಡು.’

‘ಟೋಪೀನಾ?’

ಆಗ ಮುದ್ಕಿ ಬಾಯ್ಬಿಡ್ತು.

‘ನನ್ಹತ್ರ ಐತೆ ಟೋಪಿ. ನಾನ್ ಒಲಕ್ಕೆ ನಿಮಪ್ನಿಗೆ ಊಟ ಒಯ್ಯುವಾಗ ತಲೀಮ್ಯಾಲೆ ಪಾತ್ರೆಮಡಗಕ್ಕೆ ದೊಪ್ಪೊಂದ್ ಗುಂಡ್ತುಂಡ್ ಇಟ್ಟಕೊಳ್ತಿದ್ನಿ. ಅದ್ಕೇ ಒಳ್ಗಡೆ ಕೋಸ್ಗಡ್ಡೆಮಡ್ಗಿ ರೆಕ್ಕೆ ಪುಕ್ಕ ಒಲ್ದು ಟೋಪಿಮಾಡ್ತೀನ್ ಬಿಡ್ಲೆ!’

‘ಉಡ್ಗೀಗೆ ಕಾಲ್ಗೆ ಉಂಗ್ರ ಆಕಲ್ಲಾ ಅಂದ್ನಂತೆ’

‘ಕಾಲ್ಗೆ ಆಕದ್ರೇನ್ ಕೈಗೆ ಆಕದ್ರೇನ್...? ಕೈಬೆರಳ್ಗೇ ಆಕ್ಲಿ ಬಿಡು’

‘ಅವ್ವ! ನಮ್ ನಂಜನ್ಗೆ ಉಚ್-ಗಿಚ್ ಇಡಿದೈತಾ.! ಒತ್ತಾರೇನೆ ಓಗಿ ಭೂತಯ್ಯನ್ ಕರ್ಕೊಡ್ಬಂದು ಇವನ್ದವ್ವ ಬಿಡಿಸ್ಲಾ?’

‘ಉಚ್ಚು ಮುಂಡೇದೇ! ನಮ್ನಂಜನ್ಗೆ ಮದ್ವಿ ಆದ್ರೆ ಎಲ್ಲಾ ಉಚ್ಚು ಇಳಿತೈತೆ! ನಿನ್ದೆಂಡ್ರ ಜೊತೆ ನೀನ್ಕುಣೀಬೇಕು ಮದ್ವೆಲೀ. ಅದ್ನೂ ಏಳಿದಾನೆ.... ನೀನೊಟ್ಟೆಬಿಟ್ಕೊಂಡ್ ಹ್ಯಾಂಗ್ ಮಾಡ್ತಿ... ಅದನ್ನೋಡ್ಕೋ ಓಗು.’

★★★

ಭಾನುವಾರ ಎಲ್ಲಾ ಚರ್ಚನಾಗ ಸೇರ್ಕಂಡ್ವಿ.

ಕಿರಿಸ್ತಾನ್ದವ ನಮ್ ಅಂಟೋನಿಯಪ್ಪ ತಲೇಗ್ ಕಿರೀಟ ಆಕ್ಕೊಂಡ್ ನಿಂತಿದ್ದ.

ನಮ್ಮವ್ವ, ಅನ್ನಾಕಿ, ಯೆಲ್ಲಿ ತಲೆಗೆ ದೊಣ್ಣೆ ಮೆಣಸಿನಕಾಯಿ, ನೂಲ್ಕೋಸು, ಸುವರ್ಣಗಡ್ಡೆ ತರ್ಕಾರೀನ ಟೋಪಿಗೆ ಒಲ್ಕೊಂಡು ಮ್ಯಾಲ್ಕೆ ಕಾಗೇದೂ, ನವಿಲ್ದೂ ಪುಕ್ಕ ಕಟ್‌ಕೊಂಡಿದ್ರು. ಥೇಟ್ ಕೋತಿಗಳಂಗಿದ್ರು!

ಪುಟ್ಟಸ್ವಿ ಸೀರೀಗೆ ಕಟ್ಟಿದೊಂದ್ ಲಾರೀ ಉದ್ದ ಬಿಳೇಬಟ್ಟೆಇಡ್ಡ್ ನಿಂತಿದ್ಲು, ಯೆಲ್ಲಿ.

ನನ್ಗೆ ಕೆಂಪ್ಬಣ್ಣದ್ ಮೇಲೆ ಕರೀಬಣ್ಣದ್ ಪಟ್ಟೆ ಇರೋ ಶರಾಯ್ ಹಾಕ್ಸಿದ್ದ ನಮ್ನಂಜ. ನನ್ಪುಣ್ಯ.. ನನ್ತಲೇಮ್ಯಾಕೆ ಏನೂ ಕುಂಡ್ರಿಸ್ಲಿಲ್ಲ.

ಎಲ್ಲಾರೂ ಒಸಿ ಕಂಸಾಲೆ, ಸೋಮನ್ಕುಣಿತ ಕುಣಿದ್ವಿ.

ಆಮ್ಯಾಕೆ ಆಂಟೋನಿಯಪ್ಪ ನಮ್ಮುಡ್ಗನ್ ಕಿವೀಲ್ ಏನೋ ಪಿಸುಗ್ಟ್ದ... ತಕ್ಷಣ ನನ್ಕೈಯಿಂದುಂಗ್ರ ಕಿತ್ಕಂಡ್ ಬಸ್ವೀ ಬೆರ್ಳಗೆ ಆಕ್ದ ನಂಜ.

ನಮ್ಮೆಲ್ಲಾರೆದುರ್ಗೇ ಕೂಡ್ಕೊಂಡ ಪುಟ್ಟಸ್ವೀನ..

ನಾನ್ ನಾಚ್ಕೆಯಿಂದ್ ಕೆಳ್ಗ್ ನೋಡ್ದೆ. ಎಂಗ್ರೆಲ್ಲಾ ಚಪ್ಪಾಳೆ ತಟ್ಕೊಂಡ್ರು...

......ಇಂಗಾಯ್ತು ನಮ್ನಂಜನ್ ಮದ್ವಿ.

✵

# ಈಜಿಪ್ತಿಗೆ ನಿಯೋಗ!

**- ರಾಮಿ**

**ಕೊ**ನೆಗೂ ಈಜಿಪ್ತಿನ ಸರ್ವಾಧಿಕಾರಿ ಹೋಸ್ನಿ ಮುಬಾರಕ್ ಮೂರು ದಶಕಗಳ ನಿರಂಕುಶ ಪ್ರಭುತ್ವ ಮುಗಿಸಿ ಕಂಬಿಕಿತ್ತನಲ್ಲ, ಇತ್ತ ಕೈರೋದ ತೆಹ್ರೀರ್ ಚೌಕದ ಪ್ರತಿಭಟನೆ ಮುಕ್ತಾಯದ ಹಂತಕ್ಕೆ ಬರುತ್ತಿದ್ದ ಹಾಗೆ ಅತ್ತ ನೆರೆಹೊರೆಯ ದೇಶಗಳಲ್ಲಿಯೂ ಟ್ಯುನೀಷಿಯಾ, ಈಜಿಪ್ತ್ ಮಾದರಿಯ ಕ್ರಾಂತಿ ಕಾಣಿಸಿಕೊಳ್ಳುತ್ತಿದೆ ಎಂದೆಲ್ಲಾ ಮಧ್ಯ ಪ್ರಾಚ್ಯದ ರಾಷ್ಟ್ರಗಳ ಸ್ಥಿತಿಗತಿಗಳನ್ನು ಮೆಲುಕು ಹಾಕುತ್ತಾ ಬರುತ್ತಿರುವಾಗ ಪಾರ್ಕಿನಲ್ಲಿ ಪ್ರಾಣೇಶನ ಸವಾರಿ ಎದುರಾಗಬೇಕೆ?

ಇಬ್ಬರೂ ಪಾರ್ಕಿನ ಬೆಂಚಿನ ಮೇಲೆ ಕುಕ್ಕರಿಸಿದಾಗ ಆತನೂ ಈಜಿಪ್ತಿನ ಕುರಿತಾಗಿಯೇ ಚಿಂತಿಸುತ್ತಿರುವಂತೆ ಕಂಡುಬಂದಿತು. ಆದರೆ ಆತನ ಸಮಸ್ಯೆ ಬೇರೆಯೇ ಆಗಿತ್ತು.

''ಅಲ್ಲಯ್ಯ, ಕೈರೋದಲ್ಲಿ ಆ ಪಾಟಿ ಜನ ಲಕ್ಷಗಟ್ಟಲೆಯಲ್ಲಿ ಹಿಂಡುಗಟ್ಟಿ ಕೊಂಡಿದ್ದರಲ್ಲ. ಅಲ್ಲಿ ಕಾಲ್ತುಳಿತದ ಸಮಸ್ಯೆ ಎದುರಾಗಲಿಲ್ಲವೇ?'' ಎಂಥ ಪ್ರಶ್ನೆ!

''ಹಾಗೇನೂ ಆದ ಹಾಗೆ ಕಾಣಲಿಲ್ಲ. ಪತ್ರಿಕೆಗಳಲ್ಲಿ ಅಥವಾ ಟಿ.ವಿ.ಯಲ್ಲಿ ಆ ಬಗ್ಗೆ ವಿವರವಿಲ್ಲ. ಅದನ್ನು ತೆಗೆದುಕೊಂಡು ನಾವೇನು ಮಾಡಬೇಕಾಗಿದೆ!'' ಎಂದು ಪ್ರಾಣೇಶನ ವಿಚಿತ್ರ ಕುತೂಹಲಕ್ಕೆ ಅಡ್ಡ ಕಾಲಿಟ್ಟೆ.

ಆದರೆ ಒಂದು ವಿಷಯ ನನಗೆ ಮರೆತೇಹೋಗಿತ್ತು. ಕಾಲ್ತುಳಿತದ ಸಮಸ್ಯೆ ಪ್ರಾಣೇಶನಿಗೆ ಮುಖ್ಯವಾಗಿರಲು ಬಲವಾದ ಕಾರಣವಿತ್ತು. ಆತ ಈ ವರ್ಷ ಶಬರಿಮಲೆ ಯಾತ್ರೆಗೆ ಹೋಗಿದ್ದ ಸ್ನೇಹಿತರ ಜೊತೆಗೆ. ಯಾತ್ರೆ ಮುಗಿಸಿ ಹಿಂದಿರುಗುವಾಗ ಅನೇಕರು ಗೋತಾ ಹೊಡೆದು ನೂರಾರು ಮಂದಿ ಗಾಯಗೊಂಡು ಬದುಕಿ ಬಂದರೆಂಬುದೂ ಗೊತ್ತಲ್ಲ. ಪ್ರಾಣೇಶ ಬಲಗಾಲಿನ ಹೆಬ್ಬೆರಳನ್ನು ಮಾತ್ರ ಕಳೆದುಕೊಂಡಿದ್ದ. ಕಾಲನ್ನೇ ಕತ್ತರಿಸುವುದರಲ್ಲಿದ್ದರು. ಹೇಗೋ ಬಚಾವಾದ. ಅಧ್ವಾನವೆಂದರೆ ಆತ ಸಿಕ್ಕಿದ ಎಂದರೆ ಸಾಕು ಕಾಲ್ತುಳಿತದ್ದೇ ಕಥೆ. ಈಜಿಪ್ತಿನಲ್ಲಿ ಅಷ್ಟೊಂದು ಮಂದಿ ಜಮಾಯಿಸಿದ್ದರೂ ಕಾಲ್ತುಳಿತದ ಸಮಸ್ಯೆ ಇರಲಿಲ್ಲವೇ ಎಂದು ಪ್ರಾಣೇಶನಿಗೆ ಅಚ್ಚರಿ!

ಸರಿ..... ಅಲ್ಲಿಯೇ ನಿಂತರೆ ಪ್ರಾಣೇಶ ಅದರ ಬಗ್ಗೆಯೇ ಇನ್ನಷ್ಟು ಬೋರ್ ಹೊಡೆಯುತ್ತಾನೆಂದು ಗೊತ್ತು. ಎದ್ದು ನಿಂತು ಒಂದು ಸಲಹೆ ನೀಡಿದೆ. ''ಕೇರಳ ಮುಖ್ಯಮಂತ್ರಿಗೆ ಒಂದು ಕಾಗದ ಬರಿ. ಈಜಿಪ್ತಿಗೆ ಒಂದು ನಿಯೋಗ ಕಳುಹಿಸಬೇಕೆಂದು ಸಲಹೆ ಮಾಡು. ಕಾಲ್ತುಳಿತದ ಸಮಸ್ಯೆಯನ್ನು ಕೈರೋದಲ್ಲಿ ಹೇಗೆ ನಿಭಾಯಿಸಿದರೆಂದು ತಿಳಿದು ಬರಲಿ. ಬೇಕಾದರೆ ಅಯ್ಯಪ್ಪ ಭಕ್ತನಾದ ನೀನೂ ನಿಯೋಗದಲ್ಲಿ ಸೇರಿಕೊಳ್ಳಲು ತಯಾರು ಎಂದು ತಿಳಿಸು'' ಇಷ್ಟು ಹೇಳಿ ಪ್ರಾಣೇಶ್‌ನಿಂದ ಅವತ್ತಿನ ಮಟ್ಟಿಗೆ ಪಾರಾದೆ ಅನ್ನಿ!

✵




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454


ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ತಾಳಲಾರೆನೋ ದೇವ ಧ್ವನಿವರ್ಧಕದ ಅಬ್ಬರವ...

**- ಅರುಂಧತಿ ಜೋಶಿ**

**ಕಾ**ರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಬಯಲಿನಲ್ಲಿ ಹಮ್ಮಿಕೊಂಡಾಗ, ಶಾಮಿಯಾನದಲ್ಲಿ ಅಬ್ಬರದ ಧ್ವನಿ ಎಬ್ಬಿಸುವ ಧ್ವನಿವರ್ಧಕಗಳನ್ನು ಹೇಗೆಂದು ವರ್ಣಿಸಬೇಕು! ಕಿವಿಯಾರ ಕೇಳಿ ಆನಂದಿಸಬೇಕೋ ಅಥವಾ ಸಾಕಪ್ಪ ಇದರ ಸಹವಾಸ ಎಂದು ಜಾಗ ಖಾಲಿ ಮಾಡಬೇಕೋ ನೀವೇ ಹೇಳಿ. ಇದನ್ನು ಒದಗಿಸುವ ಕಾಂಟ್ರ್ಯಾಕ್ಟರು ಮತ್ತು ಆಯೋಜಕರು ನಮ್ಮ ಶ್ರವಣ ಶಕ್ತಿಯ ಪರೀಕ್ಷೆ ಮಾಡುವುದಂತೂ ಖಾತ್ರಿಯಾಗಿದೆ.

ಅಪರೂಪಕ್ಕೆ ನಮ್ಮ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಸುಗಮ ಸಂಗೀತ, ನಗೆಹಬ್ಬವೆಂದು ಮನೋರಂಜನೆಯ ಕಾರ್ಯಕ್ರಮಗಳಿಗೆ ನಮ್ಮ ಹಾಜರಾತಿ ಹಾಕಿ ಕಣ್ಣು, ಕಿವಿಗಳನ್ನು ಪಾವನಗೊಳಿಸೋಣವೆಂದು ಗೆಳತಿಗೆ ದೂರವಾಣಿಯಲ್ಲಿ ಕರೆಮಾಡಿದೆ. ಸಂಜೆ ನಾಲ್ಕು ಗಂಟೆಗೆ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬರಬೇಕು. ಹೊರಗೆ ರಸ್ತೆಯಂಚಿನಲ್ಲಿದ್ದ ಹೊಂಗೆ ಮರದ ಕೆಳಗೆ ಕಾದಿರುವುದಾಗಿ ತಿಳಿಸಿದೆ.

**ಸುಗಮ ಸಂಗೀತವನ್ನು ಕೇಳಿ ಧನ್ಯರಾದೆವೋ ಅಥವಾ ಕಂಗಾಲಾದೆವೋ ಹೇಳುವುದು ಕಷ್ಟ.**

ಹತ್ತು ನಿಮಿಷವಾದರೂ ಗೆಳತಿಯ ಸುಳಿವೇ ಇಲ್ಲ. ಇಪ್ಪತ್ತು ನಿಮಿಷಗಳಾದವು. ಊಹುಂ, ಮಾರಾಯ್ತಿಗೆ ಹೀಗೆ ನಾನು ಒಬ್ಬಳೇ ಎಲ್ಲರನ್ನೂ ಮಿಕಮಿಕ ನೋಡ್ಕೊಂತ ನಿಂತಿರುವುದು ಬೇಸರವೆನಿಸಬಹುದೆಂದೂ ಸಹ ಹೊಳೆದಿಲ್ಲವಲ್ಲ. ತಡವಾಗಿ ಅವಳು ಪ್ರತ್ಯಕ್ಷವಾದಾಗ ಸಲೀಸಾಗಿ ಉಸಿರಾಡುವಂತಾಯಿತು.

''ಸಾರೀ ಕಣೆ, ಹೊರಡೋದಿಕ್ಕೆ ಸರಿಯಾಗಿ ಯಾಕೋ ಏನೋ ಒಂಟಿ ಸೀನು ಬಂತು ನೋಡು, ಸುಧಾರಿಸಿಕೊಂಡು ಹೊರಡೋಣಾಂತ ಕುಳಿತುಬಿಟ್ಟೆ. ಆಗ ಸಧ್ಯ! ಪಕ್ಕದ ಮನೆ ಪಂಕಜಮ್ಮ ಕೈಯಲ್ಲಿ ಹಣ್ಣು ಕಾಯಿ ಹೂವಿದ್ದ ತಟ್ಟೆಯನ್ನು ಹಿಡಕೊಂಡು ಹೊರಗೆ ಬಂದ್ರು. ಶಕುನ ಚೆನ್ನಾಗಿದೆಯೆಂದು ಹೊರಟು ಬಂದೆ. ಬೇಜಾರು ಮಾಡ್ಕೋಬೇಡ್ವೇ'' ಎಂದು ಗೋಗರೆದಳು. ಒಂದೇ ಉಸಿರಿನಲ್ಲಿ ಹೀಗೇ ಉಸಿರಿದಾಗ ''ಆಯ್ತು ಬಿಡು. ನಡಿ ಒಳಗೆ ಹೋಗೋಣ. ಮುಂದಿನ ಸಾಲಿನಲ್ಲಿ ಜಾಗ ಹುಡುಕುವ ಕಸರತ್ತು ಮಾಡಬೇಕಲ್ಲ.''

ನನ್ನ ಹಿಂದೆ ಏದುಸಿರು ಬಿಡುತ್ತ ಬಂದಳು. ''ತಾಳು ಯಾಕೆ ಓಡ್ತೀಯಾ? ಸೀಟು ಎಲ್ಲೂ ಓಡಿ ಹೋಗೋಲ್ಲ.''

ಪಾಪ! ಸ್ವಲ್ಪ ಸ್ಥೂಲ ಶರೀರ. ನನ್ನ ಅವಸರಕ್ಕೆ ತಾಳ ಹಾಕಲು ಆಗದೇ ನನಗೆ ಬ್ರೇಕ್ ಹಾಕಲು ನೋಡಿದಾಗ, ''ಗರದಿ ಹೇಗಿದೆ ನೋಡಿದೆಯಾ? ಸೀಟು ಸಿಗಬೇಕಲ್ಲ, ನಾನು ಗಡಿಬಿಡಿ ಮಾಡ್ತಿರೋದು, ಈ ಕಾರಣಕ್ಕೆ ಗೊತ್ತಾಯ್ತಲ್ಲ'' ಎಂದು ಮುಂದೆ ಹೆಜ್ಜೆ ಹಾಕಿದೆ.

ನೂಕು ನುಗ್ಗಲಲ್ಲಿ ಹೇಗೋ ಒಳಗೆ ನುಗ್ಗಿ ತೀರ ಹಿಂದಿನ ಸಾಲಿನಲ್ಲಿ ಅಕ್ಕಪಕ್ಕದಲ್ಲಿ ಎರಡು ಸೀಟು ದೊರಕಿದಾಗ, ಇಷ್ಟಾದರೂ ಕುಳಿತುಕೊಳ್ಳಲು ಸ್ಥಳ ಸಿಗ್ತಲ್ಲ ಎಂದು ಖುಶಿಯಾಯಿತು. ಒಮ್ಮೆ ಕುಳಿತ ಮೇಲೆ ಎದ್ದು ಹೊರಗೆ ಬರುವ ಛಾನ್ಸೇ ಇಲ್ಲ. ಕಾರ್ಯಕ್ರಮ ಅಷ್ಟು ಚೆನ್ನಾಗಿತ್ತೇ ಎಂದು ಕೇಳಬೇಡಿ.

ಹಿಂದಿನ ಸಾಲಿನಲ್ಲಿ ಕುಳಿತಿದ್ದರೂ, ಎದ್ದು ಹೊರಗೆ ಬರಲು ಯತ್ನಿಸಿದರೆ ಅದೇ ಸಾಲಿನಲ್ಲಿ ಕುಳಿತವರು ನಮ್ಮನ್ನು ನೋಡುವ ನೋಟ ಮುಜುಗರವೆನಿಸಿದರೂ ಅವರನ್ನು ನೂಕುತ್ತ ಹೊರಗೆ ಬರಬೇಕು. ಇಷ್ಟೆಲ್ಲ ಕಸರತ್ತು ಮಾಡಿ ಹೊರಬಂದ ಮೇಲೆ ಮತ್ತೆ ಒಳಗೆ ನುಗ್ಗಲು ಮೀನಾಮೇಷ ನೋಡಬೇಕೆನಿಸಿ ತೆಪ್ಪಗೆ ಅಲ್ಲೇ ಕುಳಿತುಬಿಟ್ಟೆವು.

ಕಾರ್ಯಕ್ರಮಕ್ಕೆ ಪಾಸು ಗಿಟ್ಟಿಸಿಕೊಂಡು, ಮಜವಾಗಿ, ತಡವಾಗಿ ಬರುತ್ತಿದ್ದ ಮಹನೀಯರು ಮತ್ತು ಮಹಿಳೆಯರು ಆರಾಮವಾಗಿ ಪಾಪ್ ಕಾರ್ನ್ ಪ್ಯಾಕೆಟ್ಟು, ಸ್ಪ್ರೈಟ್ ಬಾಟಲು, ಕುರುಕಲು ತಿಂಡಿ ಹಿಡಿದು ಕುಳಿತಿದ್ದನ್ನು ನೋಡಿ ಗೆಳತಿ ನನ್ನನ್ನು ತಿವಿದು, ''ಅಲ್ವೇ! ನಾವೂ ಪಾಸು ತೆಗೆಸಿದ್ದರೆ ಚೆನ್ನಾಗಿತ್ತಲ್ವಾ! ಈಗ ನೋಡು ನಮ್ಮ ಅವಸ್ಥೆ'' ಎಂದು ಪಿಸುಗುಟ್ಟಿದಾಗ ಉರಿಯುವ ಹುಣ್ಣಿಗೆ ಮೆಣಸಿನ ಪುಡಿ ಸವರಿದ ಹಾಗೆ ಆಗೋಲ್ವೇ? ''ಸಾಕು ಸುಮ್ನಿರು. ಎಲ್ಲಿದ್ದರೇನು? ಕಾರ್ಯಕ್ರಮವನ್ನು ನೋಡುತ್ತ ಕೇಳುತ್ತ ಖುಶಿಪಡೋಣ.''

ಅವಳ ಮಾತಿನಲ್ಲೂ ಸತ್ಯಾಂಶವಿತ್ತು. ಹಿಂದಿನ ಸಾಲಿನ ಕೊನೆಯಲ್ಲಿ ಆಸೀನರಾದ ಮೇಲೆ ವೇದಿಕೆ ಮಸಕು ಮಸುಕಾಗಿ ಕಾಣುತ್ತಿದ್ದರೆ ಕತ್ತು ಹೊರಳಿಸಿ ಕುತ್ತಿಗೆ ನೋವು ಬರಿಸಿಕೊಂಡದ್ದಷ್ಟೇ ನಮ್ಮ ಪಾಲಿಗೆ ಸಿಕ್ಕ ಉಡುಗೊರೆ.

ಅಲ್ಲಲ್ಲಿ ಟಿ.ವಿ. ಪರದೆಗಳನ್ನು ನೇತಾಡಿಸಿದ್ದರು. ಕಾರ್ಯಕ್ರಮವನ್ನು ಎಲ್ಲೇ ಕುಳಿತು ನೋಡುತ್ತಿದ್ದರೂ ಟಿ.ವಿ. ಪರದೆಯ ಮೇಲೆ ನೋಡಿ ಆನಂದಿಸಿ ಎಂದು ಪರೋಕ್ಷ ಸಂದೇಶವನ್ನು ರವಾನಿಸಿದ್ದರು.

ಹಿಂದಿನ ಸಾಲಿನಲ್ಲಿ ಕುಳಿತವರ ಪಾಡು ಗೊತ್ತಿತ್ತಾದರೂ, ಮುಂದೆ ಕುಳಿತವರ ಅವಸ್ಥೆ ಸಹ ಅದೇ ರೀತಿಯಾಗಿತ್ತು. ನೋಡಲು ಟಿ.ವಿ., ಕೇಳಲು ಧ್ವನಿವರ್ಧಕ ಡಬ್ಬಿಗಳು ಸ್ಥಳವನ್ನು ಆಕ್ರಮಿಸಿ ವಿಜೃಂಭಿಸುತ್ತಿದ್ದವು. ಅದರ ಅಕ್ಕಪಕ್ಕದಲ್ಲಿ ಕುಳಿತವರ ಪಾಡಂತೂ ತೀರ ಶೋಚನೀಯ. ಮೈಕ್ ಟೆಸ್ಟಿಂಗ್ ಮಾಡುವಾಗ ಹೊರಡುತ್ತಿದ್ದ ಬರ‍್ರೆನ್ನುವ ಶಬ್ದಕ್ಕೆ ಕಿವಿಗಳನ್ನು ಬೆರಳಿನಿಂದ ಮುಚ್ಚಿಕೊಂಡರೆ ಎದೆ ಡವ ಡವ ಹೊಡೆದುಕೊಳ್ಳಲು ಶುರು. ಜೋರಾಗಿ ಅರಚುತ್ತಿರುವ ದೊಡ್ಡ ಲೌಡ್ ಸ್ಪೀಕರುಗಳನ್ನು ಅಲ್ಲಲ್ಲಿ ಅಳವಡಿಸಿದ್ದರು.

ಕರ್ಣಾಮೃತವಾದ ಸಂಗೀತವನ್ನು ಕೇಳಲು, ನಗೆ ಹಬ್ಬದ ಹಾಸ್ಯವನ್ನು ಆಸ್ವಾದಿಸುವ ಉತ್ಕಟ ಹಂಬಲವಿದ್ದರೂ ಅಸಹಾಯಕರಾಗಿ ಕುಳಿತಿರಬೇಕಾದ ಸಂದಿಗ್ಧ. ಕಿವಿಯ ಮೇಲೆ ಅಪ್ಪಳಿಸುವ ಬಗೆ ಬಗೆಯ ಚಿತ್ರ ಸಂಗೀತ ಪಾಶ್ಚಾತ್ಯ ದಾಟಿಯಲ್ಲಿ, ಜಾನಪದ ಶೈಲಿಯಲ್ಲಿ ಧ್ವನಿ ವರ್ಧಕಗಳಿಂದ ಹೊರ ಹೊಮ್ಮಿದಾಗ ಕಿವಿಗಳು ಮರ‍್ರೆನ್ನುತ್ತಿದ್ದವು. ಯುವ ಜನಾಂಗಕ್ಕೆ ಒಳ್ಳೆಯ ರಸದೌತಣ ನಮ್ಮಂತವರಿಗೆ ಕಾರ್ಯಕ್ರಮ ಶುರುವಾದರೆ ಸಾಕೆನಿಸಿ ಮುಂದಿನ ಸಾಲಿನಲ್ಲಿ ಪರಿಚಯದ ಗೆಳತಿಯರು ಕುಳಿತಿರಬಹುದೆಂದು ಕತ್ತು ಹೊರಳಿಸಿ, ಕಣ್ಣಾಡಿಸುತ್ತ ಕುಳಿತೆವು. ಸಂಗೀತ ತಾರಕ ಸ್ಥಾಯಿಯಲ್ಲಿ ಕಿವಿಯ ಪರದೆಯ ಮೇಲೆ ದಾಳಿಮಾಡಿತ್ತು.

ಮಧ್ಯದ ಸಾಲಿನಲ್ಲಿ ಎರಡು ಸೀಟುಗಳು ಖಾಲಿಯಾಗಿದ್ದು ಗೊತ್ತಾಗಿ ದಡ ಬಡಿಸುತ್ತ ಸ್ಥಾನ ಪಲ್ಲಟ ಮಾಡಲು ಎದ್ದು, ಸುತ್ತಿನವರ ಗೊಣಗಾಟವನ್ನು ಲೆಕ್ಕಿಸದೇ ಮುಂದೆ ಹೋಗಿ ಕುಳಿತೆವು. ಒಂದು ರೀತಿಯಲ್ಲಿ ಇದೂ ಸಹ ರಾಜಕಾರಣಿಗಳ ಪಕ್ಷಾಂತರದಂತೆ ಆಗಿದೆಯೆಂದು ಅನಿಸಿತು.

ಕಾರ್ಯಕ್ರಮ ಶುರುವಾದಾಗ ಪಲ್ಲವಿಯವರ ಮಧುರ ಕಂಠದಲ್ಲಿ ಸುಗಮ ಸಂಗೀತವನ್ನು ಕೇಳುವ ಸೌಭಾಗ್ಯ ಒದಗಿದೆಯೆಂದು ಮೈಯೆಲ್ಲ ಕಿವಿಯಾಗಿ ಕುಳಿತಿದ್ದ ನಮಗೆ ಬೇತಾಳ ಬೆನ್ನು ಹತ್ತಿಬಂದ ಹಾಗೆ ಇಲ್ಲಿಯೂ ಸಹ ನಮ್ಮ ಸಾಲಿನ ಕೊನೆಯಲ್ಲಿ ದೊಡ್ಡ ಧ್ವನಿವರ್ಧಕ ಡಬ್ಬಿ ರಾಜಾರೋಷವಾಗಿ ಧ್ವನಿಯೆಬ್ಬಿಸುತ್ತ ಕರ್ಣ ಮತ್ತು ಎದೆ ಗುಂಡಿಗೆಯನ್ನು ಅಲ್ಲಾಡಿಸುತ್ತ, ಕೇಳುತ್ತಿರುವುದು ಸುಗಮ ಸಂಗೀತವೋ, ಮೇಘ ಗರ್ಜನೆಯೋ ಎಂದು ಸಂಶಯ ಹುಟ್ಟಿಸಿತು. ಸುಗಮ ಸಂಗೀತವನ್ನು ಕೇಳಿ ಧನ್ಯರಾದೆವೋ ಅಥವಾ ಕಂಗಾಲಾದೆವೋ ಹೇಳುವುದು ಕಷ್ಟ.

ನಗೆ ಹಬ್ಬದ ಕಾರ್ಯಕ್ರಮ ಶುರುವಾದಾಗ, ಪರಿಚಿತ ಹಾಸ್ಯಪಟುಗಳು ವೇದಿಕೆಯ ಮೇಲೆ ಕಾಣಿಸಿಕೊಂಡಾಗ, ಈಗಲಾದರೂ ನೆಮ್ಮದಿಯಾಗಿ ಅವರ ನಗೆ ಚಟಾಕಿಗಳನ್ನು ಕೇಳಿ ಆನಂದಿಸಬಹುದೆಂದು ಆತುರದಿಂದ ಕಾಯುತ್ತ ಕುಳಿತೆವು. ನಗೆಯ ಕಡಲಿನಲ್ಲಿ ನಮ್ಮನ್ನು ತೇಲಿಸಲು ಹೊರಟ ಘಟಾನುಘಟಿಗಳ ಹಾಸ್ಯವನ್ನು ಆಲಿಸಿ ಧನ್ಯರಾಗೋಣವೆಂದು ಹಾಕಿಕೊಂಡ ಲೆಕ್ಕಾಚಾರ ಬುಡಮೇಲಾಯಿತು. ವೇದಿಕೆ ಮಂಕು ಮಂಕಾಗಿ ಕಾಣಿಸಿದರೆ, ತಮ್ಮ ಹಾಸ್ಯದಿಂದ ಹಾಸ್ಯಧುರೀಣರು, ಎಲ್ಲರನ್ನೂ ರಂಜಿಸುತ್ತಿದ್ದರೆ, ಧ್ವನಿವರ್ಧಕದಿಂದ ಜೋರಾಗಿ ಕಿವಿಯ ಮೇಲೆ ಅಪ್ಪಳಿಸುತ್ತಿದ್ದ ಹಾಸ್ಯ, ವಿನೋದಕ್ಕೆ ನಗುತ್ತ ಸ್ವಲ್ಪವಾದರೂ ಒತ್ತಡದಿಂದ ಹೊರ ಬರಲು ಪ್ರಯತ್ನಿಸುತ್ತಿದ್ದೆವು. ನಗೆಹಬ್ಬವನ್ನು ದೂರದರ್ಶನದಲ್ಲಿ ನೇರ ಪ್ರಸಾರ ಮಾಡುತ್ತಿದ್ದಾರೆಂದು ಪತಿದೇವರ ಮೊಬೈಲ್ ಸಂದೇಶ ತಲುಪಿತು. ಸುದ್ದಿ ಗೊತ್ತಾದ ಕೂಡಲೇ ಇಲ್ಲೇ ಕುಳಿತು ಚಡಪಡಿಸುವುದಕ್ಕಿಂತ ಮನೆಯಲ್ಲಿ LED ಟಿ.ವಿ. ಮುಂದೆ ಕುಳಿತು ನೋಡಿ ಆನಂದಿಸಬಹುದಲ್ಲ ಎಂದು ಜ್ಞಾನೋದಯವಾಯಿತು. ಮತ್ತೆ ಅಕ್ಕಪಕ್ಕದವರ ತೀಕ್ಷ್ಣ ನೋಟವನ್ನು ಎದುರಿಸುತ್ತ ಶಾಮಿಯಾನಾದಿಂದ ಹೊರ ಬಂದು ಮನೆಯ ಕಡೆ ಪಾದ ಬೆಳಸಿದೆವು.

ನಮ್ಮನ್ನು ನಗೆಯ ಕಡಲಿನಲ್ಲಿ, ಸಂಭ್ರಮದಲ್ಲಿ ತೇಲಿಸಿದ ಹಾಸ್ಯಪಟುಗಳ ಪ್ರತ್ಯಕ್ಷ ದರ್ಶನದ ಸೌಭಾಗ್ಯ ಸಿಕ್ಕಿದ ಅಲ್ಪ ಸಂತೋಷದಲ್ಲಿ ಅವರ ಪ್ರತಿಭೆಯನ್ನು ಮನದಲ್ಲೇ ಅಭಿನಂದಿಸುತ್ತ ಹೊರಟೆವು.

ಈ ಕಾರ್ಯಕ್ರಮವನ್ನು ಅರ್ಧ ವೀಕ್ಷಿಸಿ, ಕಿವಿಯಾರ ಕೇಳಿ ಬಂದ ಮೇಲೆ ಒಂದು ಅಂಶ ಖಚಿತವಾಗಿ ಮನವರಿಕೆಯಾಯಿತು. ವೇದಿಕೆಯಿಂದ ಬಹಳ ದೂರದಲ್ಲಿ ಕುಳಿತವರಿಗೆ ಕಾರ್ಯಕ್ರಮಗಳು ಅಸ್ಪಷ್ಟವಾಗಿ ಕಾಣಿಸುವುದರಿಂದ ದೂರದರ್ಶನವಾಗಿತ್ತು. ಅದನ್ನು ದೂರದರ್ಶನದವರು ನೇರಪ್ರಸಾರ ಮಾಡಿದಾಗ ಟಿ.ವಿ. ಪರದೆಯ ಮೇಲೆ ಸ್ಪಷ್ಟ ವೀಕ್ಷಣೆ ಮಾತ್ರವಲ್ಲ, ಕಿವಿಯ ಪರದೆಗೂ ನೋವಾಗದೇ ನೋಡುವ ಸೌಲಭ್ಯವನ್ನೊದಗಿಸಿದ ಚಾನಲ್ಲಿನವರು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದ್ದರು. ಟಿ.ವಿ. ಆವಿಷ್ಕಾರ ಮಾಡಿದ ಜಾನ್ ಬೆಯರ್ಡ್‌ಗೆ ಮನಃಪೂರ್ವಕ ವಂದನೆಗಳು. ✵

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ಮಾನವನನ್ನು ಸೃಷ್ಟಿಸುವ ಮೊದಲು ದೇವರು ಏನು ಮಾಡುತ್ತಿದ್ದ?
- ನನಗೆ ಕಾಯಿಲೆ ಬೀಳಲು ಸಮಯವೂ ಇಲ್ಲ; ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಪಚರಿಸಿಕೊಳ್ಳಲು ಹಣವೂ ಇಲ್ಲ.
- ನಿಮಗೆ ಒಂದು ದೊಡ್ಡ ಮೊತ್ತದ ಚೆಕ್ ತಂದುಕೊಡುತ್ತಾನೆ ಎಂದ ಮಾತ್ರಕ್ಕೆ ಅಂಚೆ ಪೇದೆ ಒಬ್ಬ ದೊಡ್ಡ ವ್ಯಕ್ತಿ ಆಗುವುದಿಲ್ಲ.
- They know well enough each other not to like each other.
- ಸರ್ಜನ್ ದಿನಾ ಒಂದು ಹಾರ ತೊಗೊಂಡು ಹೋಗ್ತಿದ್ದರು; ಏಕೆ? ಎಂದು ಕೇಳಿದರೆ ಆಪರೇಷನ್ ಸಕ್ಸೆಸ್ ಆದರೆ ನನಗೆ, ಇಲ್ಲದಿದ್ದರೆ....

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಐಶ್ವರ್ಯ ಸಂಪಾದಿಸಲು ನಮ್ಮ ಅರ್ಥ ಆರೋಗ್ಯ ವಿನಿಯೋಗಿಸುತ್ತೇವೆ. ನಂತರ ಆ ಆರೋಗ್ಯ ಮರಳಿ ಪಡೆಯಲು ಸಂಪಾದಿಸಿದ ಐಶ್ವರ್ಯ ಬಳಸುತ್ತೇವೆ.
- Mr. Apoloji ಎಂದರೆ ಯಾರು? ಅಥವಾ ಏನು?
- ಗುರಿಯತ್ತ ನೆಟ್ಟ ದೃಷ್ಟಿಯನ್ನು ಹೊರಳಿಸಿದಾಗ ಕಂಡು ಬರುವುದೇ ಅಡಚಣೆಗಳು.
- ಲಭ್ಯವಿರದ ಬೇರಿಗೆ ಕಾಯಿಲೆ ವಾಸಿ ಮಾಡುವ ಶಕ್ತಿ ಇರುತ್ತದೆ.
- When dil mange more you have to pay more.
- ಸಂದೇಹವೇ ಬರಿಸದ ನಂಬಿಕೆ ನಂಬಿಕೆ ಆಗುವುದಿಲ್ಲ; ಅದು ಮೂಢನಂಬಿಕೆ ಆಗುತ್ತದೆ.
- ಭಾಜಪದ ಪ್ರಣವ್ ಮುಖರ್ಜಿ ಯಾರು ಗೊತ್ತೆ? ಅಡ್ವಾಣಿ – ಪ್ರಧಾನಿ ಆಗಲು ಕಾಯುತ್ತಲೇ ಇರುವ ವ್ಯಕ್ತಿ.
- You don't have to be believer yourself to have faith in the faith of others.
- ನೀವು ನಿಜವಾಗಲೂ ಸಭ್ಯರೇ? ಹಾಗಿದ್ದರೆ ಮೋಸ ಮಾಡಲು ಅವಕಾಶ ಇದ್ದಾಗಲೂ ನೀವು ಮೋಸ ಮಾಡುವುದಿಲ್ಲ!
- ಕುಳ್ಳರನ್ನು vertically challenged ಎಂದು ಕರೆಯಬಹುದೆ?

✵

# ರವೂಲನೆಂಬುವ ಕರ್ಮಯೋಗಿಯೂ – ನಮ್ಮೂರಿನ ರಾಮಲಿಂಗನೂ...

**– ವಾಣೀ ಸುರೇಶ್**

**ಟೆ**ಕ್ಸಾಸಿನ ಅನೇಕ ಕಡೆಗಳಲ್ಲಿ ಎರಡು ದಿನದಿಂದ ಒಂದೇ ಸಮ ಸುರೀತಿದ್ದ ಮಳೆ. ಅವತ್ತಂತೂ ನಮ್ಮ ಆಷಾಢದ ಗಾಳಿ – ಶ್ರಾವಣದ ಜಡಿ ಎರಡರ ಮಿಶ್ರಣದಂತಿದ್ದು, ಮಳೆಗಾಲದಲ್ಲಿನ ನಮ್ಮ ನಂದಿ ಬೆಟ್ಟವನ್ನು ನೆನಪಿಸುವ ಹವೆಯಂತಿತ್ತು.

ಬಿಳಿಯ ಪಿಂಗಾಣಿ ಬಟ್ಟಲಲ್ಲಿ ನಿನ್ನೆ ಮಾಡಿಟ್ಟಿದ ಖಾರದಪುರಿ ತೊಗೊಂಡು, ಅರ್ಧ ನೋಡಿದ್ದ ಅನಂತನಾಗ್ ಸುಭಾಷಿಣಿ ನಟಿಸಿದ್ದ ಸಿನಿಮಾ ಡಿವೀಡಿ ನೋಡಲು ಹವಣಿಸುತ್ತಿದ್ದಾಗ ಮನೆಯ ಕರೆಘಂಟೆ ಕಿಣಿಕಿಣಿಸಿತು.

''ಹಾಯ್, ದಿಸ್ ಈಸ್ ರವೂಲ್ ಹಿಯರ್. ಮೇ ಐ ಕಂ ಇನ್'' – ಅಂತ ಕೇಳಿದ, ಸೈಂಧವನಂತಿದ್ದ ಆಸಾಮಿಯೊಬ್ಬ, ಅವನ ಹಿಂದೆ ನಿಂತಿದ್ದ ಮಧ್ಯ ವಯಸ್ಸಿನ ಹೆಂಗಸೊಬ್ಬಳ ಜೊತೆಯಲ್ಲಿ ಒಬ್ಬಳು ಕೆಂಚುಗೂದಲು ಸುಂದರಿ ಮತ್ತು ಬೇಸ್ ಬಾಲ್ ಪಟುವಂತಿದ್ದ ಮತ್ತೊಬ್ಬ ಹುಡುಗ ನಿಂತಿದ್ದರು. ಇದ್ಯಾರಿರಬಹುದು ಅಂತ ಯೋಚಿಸುವಷ್ಟರಲ್ಲಿ, ಮನೆಯೊಳಗೆ ಬರಲು ಪರಿಚಿತರಂತೆ ಉತ್ಸುಕರಾಗಿದ್ದಂತೆ ಅನ್ನಿಸಿದ ಅವರನ್ನು ನೋಡಿ, ತಕ್ಷಣ ಬೆಳಗ್ಗೆ ಆಫೀಸಿಗೆ ಹೊರಡುವ ಮುನ್ನ, ಮಗಳು ಇವತ್ತು ಕ್ಲೀನರ್ಸ್ ಬರ್ತಾರೇಂತ ಹೇಳಿ ಹೋಗಿದ್ದು ನೆನಪಾಯ್ತು. ಆದರೆ ಹೆಸರೇನು ಹೇಳಿದಳೂಂತ ಬಡಪೆಟ್ಟಿಗೂ ಜ್ಞಾಪಕಕ್ಕೆ ಬರಬೇಕಲ್ಲ!

ಸಾಕಷ್ಟು ಸುಸಂಸ್ಕೃತರಂತೆಯೇ ಕಾಣುತ್ತಿದ್ದ ಇವರುಗಳನ್ನು ಮನೆಗೆಲಸದವರಿರಬಹುದು ಅಂತ ಹೇಗೆ ಒಪ್ಪಿಕೊಳ್ಳುವುದು? ಕೈ ಗಡಿಯಾರ ನೋಡಿದೆ. ಮಗಳು ಹೇಳಿದ್ದ ಸಮಯಕ್ಕೆ ಇನ್ನೂ ಐದು ನಿಮಿಷವಿತ್ತು. ನನ್ನ ಪುಣ್ಯಕ್ಕೆ, ಮತ್ತೆ ಕಾರಿಗೆ ಹೋದ ಆ ಹುಡುಗ ಒಂದಿಷ್ಟು ಸ್ಪ್ರೇಗಳು ಮತ್ತು ಉದ್ದನೆಯ ಕೋಲಿನ ತುದಿಯಲ್ಲಿ ಸಿಕ್ಕಿಸಿದ ಜೂಲು ಜೂಲಾದ ಬ್ರಶ್‌ನಂತಿದ್ದ ವಸ್ತುವಿಶೇಷವೊಂದನ್ನು ಹಿಡ್ಕೊಂಡು ಬಂದಿದ್ದು ನೋಡಿ ಇವರೇ ಅವಳು ಹೇಳಿದವರಿರಬೇಕೆಂದು ಖಾತ್ರಿಯಾಯ್ತು.

ಮುಂದೆ ಹೆಜ್ಜೆಯಿಡ್ತಾ – ''ಸುಮಾ ಹೇಳಿರಬೇಕಲ್ಲವೇ ನಾವು ಬರುತ್ತೀವೀಂತ'' ಎಂದ ಮುಂದೆ ನಿಂತಿದ್ದ ಧಾಂಡಿಗ.

ಬೇಗ ಚೇತರಿಸಿಕೊಂಡು, 'ಹೂ, ಹೌದು ಹೌದು, ಬನ್ನಿ' – ಅಂತ ಕರೆದೆ.

ಆದರೂ ತೀರಾ ಇದೇನು ನಾಲ್ಕು ನಾಲ್ಕು ಜನ ಧಾಂಡಿಗರು! ಹೇಗಪ್ಪ ಇವರನ್ನು ಸಂಭಾಳಿಸೋದು ಅಂತ ಅನ್ನುವಷ್ಟರಲ್ಲಿ, ಗುಂಪಿನಲ್ಲಿನ ಹಿರಿಯಾಕೆ ಅಭ್ಯಾಸಬಲದಂತೆ ಅಂತ

ಅನ್ನಿಸುವಂತೆ, ನನ್ನ ಇರುವಿಕೆಯನ್ನೇ ಕೇರ್ ಮಾಡದೆ ಸೀದಾ ಕಾರ್ ಶೆಡ್ಡಿಗೆ ಹೋಗಿ ಬಕೆಟ್ಟುಗಳು, ತರತರದ ಲಿಕ್ವಿಡ್ ಸೋಪುಗಳಿರುವ ಇನ್ನೊಂದಿಷ್ಟು ಸ್ಪ್ರೇಗಳು, ಮಾಪ್-ಗಳು, ಗ್ಲೋವ್ಸಿನ ಡಬ್ಬದಿಂದ ತೆಗೆದ ಹೊಸ ಗ್ಲೋವ್‌ಸುಗಳು ಎಲ್ಲವನ್ನೂ ತಂದು ಉಳಿದವರಿಗೂ ಹಂಚಿದಳು. ಎಲ್ಲರಿಗೂ ಸ್ಪಾನಿಶ್ನಲ್ಲಿ ಕಚಪಚಾಂತ ಅದೇನನ್ನೋ ಸೀರಿಯಸ್ ಆಗಿ ಆದೇಶ ನೀಡಿದಳೂಂತ ಕಾಣತ್ತೆ. ಕಣ್ಣುಮುಚ್ಚಿ ಬಿಡೋಷ್ಟರಲ್ಲಿ ಒಬ್ಬೊಬ್ಬರೂ ಒಂದೊಂದು ರೂಮಿನತ್ತ ನಾಲ್ಕೂ ದಿಕ್ಕಿನಲ್ಲಿ ಸ್ಪ್ರೇ, ಮಾಪ್-ಗಳೊಂದಿಗೆ ಕಣ್ಮರೆಯಾದರು. ನಾನು ಯಾರನ್ನ ಅಂತ ತಾನೇ ನೋಡ್ಕೊಳ್ಳಲಿ?!

ಮುಂದೆ ಸರಿದ ಮೂರು ಘಂಟೆಗಳಲ್ಲಿ, ಒಮ್ಮೊಮ್ಮೆ ಕೇಳಿಸುತ್ತಿದ್ದ ಮೆಲ್ಲಗಿನ ಸಿಳ್ಳೆಯ ಸದ್ದು ಹೊರತು ಬೇರೆಯಂತೆ - ವ್ಯಾಕ್ಯೂಮ್ ಕ್ಲೀನರಿನ ಸದ್ದು, ಉಜ್ಜುವ, ಒರೆಸುವ, ಹತ್ತಿ-ಇಳಿಯುವ ಹಾಗೂ ನೀರಿನ ಸದ್ದನ್ನು ಬಿಟ್ಟರೆ - ಒಂದಕ್ಷರ ಮಾತಿಲ್ಲ ಕತೆ ಇಲ್ಲ! ಮತ್ತೆ ನಾಲ್ವರೂ ನಾನಿದ್ದ ಸಿಟ್ಟಿಂಗ್ ರೂಮಿಗೆ ಬಂದು 'ನಮ್ಮ ಕೆಲಸ ಮುಗಿಯಿತು, ಇನ್ನೂ ಹೋಗುತ್ತೇವೆ, ಬೈ' ಎಂದಾಗಲೇ ಗೊತ್ತಾದದ್ದು - ಇವರಿಗೊಪ್ಪಿಸಿದ್ದ ಎಲ್ಲ ಕೆಲಸವೂ ಮುಗಿದಿರಬೇಕೂಂತ.

ಈ ಕಡೆ, ಮನೆಯೊಳಗೆ ಎಲ್ಲಿ ಯಾವುದನ್ನು ನೋಡಿದರೂ ಹೊರಗೆ ಮಳೆಯಲ್ಲಿ ನೆನೆದ ಹಸಿರೆಲೆಗಳ ಹಾಗೇ ಹೊಚ್ಚ ಹೊಸದಾಗಿ ಕಾಣಿಸುತ್ತಿತ್ತು!

ಕೊನೆಯ ಪಕ್ಷ ಎಲ್ಲರ ಹೆಸರನ್ನಾದರೂ ತಿಳಿಯುವ ನನ್ನ ಒಂದು ಕೆಟ್ಟ ಕುತೂಹಲದಿಂದ ಅವರನ್ನು ಮಾತಾಡಿಸಿದಾಗ ಅದದ್ದು - ಹಿರಿಯಾಕೆ ರವೂಲನ ತಾಯಿ ಮರಿಯಾ, ಹಾಗೂ ಇನ್ನೊಬ್ಬ ಅವನ ತಮ್ಮ ಬೆನಿಟೋ ಮತ್ತು ಅವನ ಗರ್ಲ್ ಫ್ರೆಂಡ್ ಸೋಫಿ ಎಂಬ ಮೆಕ್ಸಿಕನ್ ಅವಿಭಕ್ತ ಕುಟುಂಬದವೊಂದರ - ಒಂದು ತುಣುಕಿನ ಪರಿಚಯ... ಅದಿರಲಿ.

ನನಗೆ ಸ್ವಲ್ಪ ವಿಚಿತ್ರ ಅನ್ನಿಸುವುದು ಇಲ್ಲಿನ ಈ ಕ್ಲೀನರ್ಸ್ ಕಾನ್ಸೆಪ್ಟಿನ ಇನ್ನೊಂದು ಮುಖ. ಈ ಕ್ಲೀನರ್ಸ್ ಬರುವ ಮೊದಲು, ಅವರು ಬರ್ತಾರೇಂತ ಈ ಚಿಕ್ಕ ವಯಸ್ಸಿನ ಯಜಮಾನ-ಯಜಮಾನಿಯರು ಪಡುವ ಕಷ್ಟ! ಬೇಕಾದ್ರೆ, ಉದಾಹರಣೆಗೆ ನಮ್ಮ ಪರಿಚಯದ ಶಿಲ್ಪಾನ್ನೇ ತೊಗೊಳ್ಳೋಣ.

''ಅರುಣ್, ನಾನು ಬೆಡ್ ರೂಮು, ಲಿವಿಂಗ್, ಸಿಟ್ಟಿಂಗ್, ಗೆಸ್ಟ್, ಕಂಪ್ಯೂಟರ್ ರೂಮುಗಳನ್ನು ನೋಡ್ಕೊಂಡು ನಿನಗೊಂದು ಚೂ..ರು ಕೆಲಸ ಉಳಿಸ್ತೀನಿ, ಅಷ್ಟೇ. ಏನಿಲ್ಲ, ನೀನು ಒಂದ್ಸ್ವಲ್ಪ ಅಡಿಗೆಕಟ್ಟೆ, ಸ್ಟೋವು, ಪ್ಯಾಂಟ್ರಿ(ಉಗ್ರಾಣ) ಕ್ಲೀನ್ ಮಾಡಿಬಿಟ್ಟು, ನಿನ್ನೆ ನೀನು ಪಲ್ಯ ಮಾಡಿದ ಬಾಂಡ್ಲೇನೂ ಆಮೇಲೆ ಆ ದೋಸೆ ತವಾನೂ ತೊಳೆದುಬಿಟ್ಟು, ಬಾತ್ರೂಮುಗಳು, ಡೈನಿಂಗ್ ಏರಿಯಾ ನೋಡ್ಕೋ. ಹಾಗೇ ಒಂದು ಸ್ವಲ್ಪ ಡ್ರೈಯ್ಯರ್ನಿಂದ ಬಟ್ಟೆ ತೆಗದು ಡ್ರೆಸ್ಸರ್ ಒಳಗಿಟ್ಟಿಟ್ಟು, ಅವೀಗೆ ಡಯಾಪರ್ ಬದಲಾಯಿಸಿ ಸೀರಿಯಲ್ ತಿನ್ನಿಸಿ, ಬಿಟ್ಟುಬಿಡು ಪ್ಲೀಸ್. ಇನ್ನೇನು ಒಂದರ್ಧ ಘಂಟೆಯಲ್ಲಿ ಕ್ಲೀನರ್ಸ್ ಬಂದೇಬಿಡ್ತಾರೆ'' - ಎನ್ನುವ ಅವಳ ಪಡಿಪಾಟಲಿಗೆ ಏನನ್ನೋದಕ್ಕೆ ಸಾಧ್ಯ? ಅಂದಹಾಗೆ ಪಾಪ, ಬಡಪಾಯಿ ಅವಿ, ಅವರ ಎರಡು ವರ್ಷದ ಮಗು...

ಆದರೆ ಅವರು ಬಂದರೆ ಇಲ್ಲಿ ಇವರೇಕೆ ದಡಬಡಗುಟ್ಕೊಂಡು ಎಲ್ಲಾ ಕ್ಲೀನ್ ಮಾಡಬೇಕು? ಹಾಗಿದ್ದರೆ ಅವರನ್ನು ಕರೆಯುವುದಾದರೂ ಏಕೆ ಎಂಬ ಅನುಮಾನ ಬರುವುದು ಸಹಜವೇ ತಾನೇ? ಆಫ್ ಕೋರ್ಸ್, ನನಗಿನ್ನೂ ಈ ಯಕ್ಷ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ ನೋಡಿ!

ನನ್ನ ಪ್ರಕಾರ - ಸಾಧಾರಣವಾಗಿ ಇಲ್ಲಿ ಎಲ್ಲೆಲ್ಲೂ ಕಂಡುಬರುವ ಅಚ್ಚುಗಟ್ಟಿನ ವಾತಾವರಣ ನಮ್ಮ ಶಿಲ್ಪಳಂತಹವರನ್ನು ಸುಪ್ತವಾಗಿ ಪ್ರಚೋದಿಸಲು ಕಾರಣವಿರಬಹುದು. ಆದರೆ ಕೆಲಸಗಾರರು ಬರುವ ಮೊದಲೇ ಸಾಮಾನುಗಳನ್ನು ಎತ್ತಿಟ್ಟಿದ್ದರೆ ಅವರು ಚೆನ್ನಾಗಿ ಸ್ವಚ್ಛಗೊಳಿಸಲು ಸಾಧ್ಯವಾಗಬಹುದು ಎನ್ನುವುದು ಈ ಅಭ್ಯಾಸಕ್ಕೆ ಇವರುಗಳು ಕೊಡುವ ಕಾರಣ. ಆದರೆ ನನ್ನ ಅನುಭವದಲ್ಲಿ, ಕೆಲಸ ಮಾಡುವುದರಲ್ಲಿ ಕ್ಲೀನರ್ಸ್ ತೋರಿಸುವ ನಿಯತ್ತನ್ನು ಗಮನಿಸಿದಾಗ ಈ ಕಾರಣಕ್ಕೆ ಹೆಚ್ಚು ಹುರುಳಿರಲಾರದು - ಎಂದೇ ನನ್ನ ಭಾವನೆ.

ಆದರೆ, ವಾಸ್ತಾವವಾಗಿ ನಮ್ಮೂರಿನ ಪರಿಸರದಲ್ಲಿ ಬೆಳೆದ ಇವರುಗಳಿಗೆ, ಕ್ಲೀನರ್ಸ್ ಬಂದರೆ ಇನ್ನೊಂದು ರೀತಿಯ ಸುಪ್ತವಾದ ಮುಜುಗರವೂ ಇರುವಂತೆ ತೋರುತ್ತೆ! ನಮ್ಮ ಸಮಾಜದಲ್ಲಿರುವ ಮಡಿವಂತಿಕೆ ಇದರ ಕಾರಣವಿರಬಹುದು. ಅವರು ಬೇರೆ ಇನ್ಯಾರದ್ದಾದರೂ ಮನೆಯ ಟಾಯ್ಲೆಟ್ ಕ್ಲೀನ್ ಮಾಡಿ ಬಂದಿರುವ ಸಾಧ್ಯತೆಯಿರುವುದರಿಂದ, ನಮ್ಮ ಸಂಸ್ಕೃತಿಯಲ್ಲಿ ಬೆಳೆದಿರುವ ಇವರುಗಳು ಬಹುಶಃ ತಮ್ಮ ಅಡಿಗೆ, ಅಡಿಗೆ ಮನೆಯ ಸಾಮಾನುಗಳು, ಇತ್ಯಾದಿಗಳನ್ನು ಅವರುಗಳು ಬರುವ ಮೊದಲೇ ಫ್ರಿಜ್ಜಿನೊಳಗೆ ಎತ್ತಿರಿಸಿಡಲು, ಅಥವಾ ತೊಳೆದೆತ್ತಿರಿಸಿಡಲು ಇಚ್ಛಿಸುತ್ತಾರೆ. ಕೆಲವರು ಶಿಲ್ಪಳಿಗಿಂತಾ ಇನ್ನೂ ಒಂದು ಹೆಜ್ಜೆ ಮುಂದುವರೆದು, ಅವರಿಗೆ ತಮ್ಮ ಹಾಸಿಗೆ ಹೊದಿಕೆಗಳನ್ನು ತಾವೇ ಸರಿಪಡಿಸಿಕೊಳ್ಳುವುದಾಗಿ ತಿಳಿಸುವುದೂ ಉಂಟು. ಹೀಗಾಗಿ ಒಂದು ರೀತಿಯಲ್ಲಿ ನೋಡಿದರೆ ಕ್ಲೀನರ್ಸ್ ಬರುವುದರಿಂದ, ಇವರುಗಳಿಗೆ ಕೆಲಸದ ಹೊರೆ ಇನ್ನೂ ಜಾಸ್ತಿಯಾಗುಲ್ವೇ ಎಂದು ಮೇಲ್ನೋಟಕ್ಕೆ ನಮ್ಮಂತಹವರಿಗೆ ಅನ್ನಿಸುತ್ತದೆ!

ಆದರೆ, ವಾರವಿಡೀ ಗಾಣದೆತ್ತುಗಳಂತೆ ದುಡಿದು ದಣಿಯುವ ಈ ಜೀವಗಳಿಗೆ ಒಂದು ದಿನ ಮನೆಗೆಲಸದಿಂದ ಬಿಡುವು ದೊರೆತರೆ ಅದೂ ಒಂದು ವರದಂತೇ ಅಲ್ವೇ? ಅಲ್ಲದೆ ನಾನು ಕಂಡಂತೆ, 'ಟೈಮ್ ಈಸ್ ಮನಿ' ಎನ್ನುವ ಇಲ್ಲಿಯ ಸಂಸ್ಕೃತಿಯಲ್ಲಿ ಅದ್ದಿ ಮುಳುಗಿರುವರಿಗೆ, ಕ್ಲೀನರ್ಸ್‌ಗಳಿಗಾಗಿ ಹಣ ಚೆಲ್ಲಿ, ತಮಗಾಗಿ ಕೊಂಚ ಹೆಚ್ಚಿಗೆ ಬಿಡುವನ್ನು ಗಳಿಸುವುದು ದುಂದುಗಾರಿಕೆಯೆಂದು ಖಂಡಿತಾ ಅನ್ನಿಸುವುದಿಲ್ಲ. ಇಲ್ಲಿಯ ಜೀವನವನ್ನು ರೂಪಿಸಿಕೊಳ್ಳುವಾಗಿನ ಅನಿವಾರ್ಯತೆಗಳಾದ ಇನ್ನಿತರ ದ್ವಂದ್ವಗಳಂತೆ ಇದೂ ಮತ್ತಿನ್ನೊಂದು ಎಂದವರು ಭಾವಿಸುವುದರಲ್ಲಿ ತಪ್ಪೇನಿರಲು ಸಾಧ್ಯ ಪಾಪ!

ಇನ್ನೂ ಈ ಕ್ಲೀನರ್ಸ್‌ನ ಪ್ರಾಮಾಣಿಕತೆ, ಕಾರ್ಯವೈಖರೀನ ನೀವು ನೋಡಿಯೇ ನಂಬಬೇಕು. ಅವರ ಬಳಿ ತಮ್ಮ ಮನೆಯ ಕೀಲಿಕೈಯನ್ನು ಕೊಟ್ಟು ಹೋದರೂ ಅವರ ಪಾಡಿಗೆ ಅವರು ಬರಲು ಒಪ್ಪಿಕೊಂಡಿರುವ ಸಮಯಕ್ಕೆ ಸರಿಯಾಗಿ ಮಳೆ-ಹಿಮ ಎಂಥದ್ದೇ ಪರಿಸ್ಥಿತಿಯಿದ್ದರೂ ಬಂದು ತೋರುವ ನಿಯತ್ತೇ ಒಂದು ಚೆನ್ನ!

ಹಾಗೆ ಬರುವುದಷ್ಟೇ ಅಲ್ಲದೇ, ಮನೆಯವರು ಇಲ್ಲದಿದ್ದರೂ ಮನೆಯ ಬಾಗಿಲುಗಳ ಚಿಲಕಗಳಿಂದ ಮೊದಲುಗೊಂಡು, ಎಲ್ಲಾ ಕಿಟಕಿಗಳ ವೆನೆಶಿಯನ್ ಬ್ಲೈಂಡುಗಳ ಪ್ರತಿಯೊಂದು ಪಟ್ಟಿಯ, ಫ್ಯಾನಿನ ಬ್ಲೇಡುಗಳ ಹಿಂಬದಿಯ ಧೂಳನ್ನೂ ಸಹಾ ಹೊಡೆದು, ಇಲ್ಲಿಯ ವುಡನ್ ಫ್ಲೋರಿಂಗು ಮತ್ತು ಮಹಡಿ ಮೆಟ್ಟಲಿನ ಮರದ ಕೈಪಟ್ಟಿಯನ್ನೂ ಪಾಲಿಶ್ ಮಾಡಿ, ಸಾಲದ್ದಕ್ಕೆ ಬಾತ್ರೂಮಿನ ಬಲ್ಬುಗಳಿಂದ ಹಿಡಿದು ಮನೆಯ ಇತರ ದೀಪದ ಗೊಂಚಲುಗಳ ಬಲ್ಬುಗ್ಗಳನ್ನೂ, ಕೊನೆಗೆ ಬಾತ್ರೂಮಿನ ನಲ್ಲಿಗಳ ಹಿಡಿಕೆಗಳನ್ನೂ ಸಹಾ 'ಡೀಪ್ ಕ್ಲೀನಿಂಗ್' ಎಂಬ ಹೆಸರಿನಡಿ ಅವರುಗಳು ಸ್ವಚ್ಛಗೊಳಿಸಿ ಹೋಗುವ ಅವರ ರೀತಿಯೇ ಅನುಕರಣೀಯ! ಅವರಿಗಾಗಿ ಚೆಲ್ಲುವ ಹಣದ ಸಾರ್ಥಕತೆ! ನಿಜ ಹೇಳಬೇಕೂಂದರೆ ವಿಶ್ವದಾದ್ಯಂತ ಯುವ ಜನತೆ ಮಾರುಹೋಗುವ ಇಲ್ಲಿಯ ವರ್ಕ್ ಕಲ್ಚರ್ ಅಂಥದ್ದು ನೋಡಿ! ಅದು ಗೊತ್ತಿದ್ದ ವಿಷಯವೇ ಆದರೂ, ವಿದ್ಯಾವಂತರಿಗಷ್ಟೇ ಅಲ್ಲದೆ, ಇಲ್ಲಿಯ ಯಾವುದೇ ಸ್ತರದಲ್ಲಿಯೂ ಅದು ಎಷ್ಟು ಎದ್ದು ಕಾಣುತ್ತೆ ಅನ್ನೋದು, ಈ ಸಲದ ನಮ್ಮ ಪ್ರವಾಸದಲ್ಲಿ ನನ್ನ ಗಮನಕ್ಕೆ ಬಹು ಮಟ್ಟಿಗೆ ಕಂಡುಬಂದ ಅಂಶ!

ಇದಷ್ಟೇ ಅಲ್ಲದೆ, ಸಾಮಾನ್ಯವಾಗಿ ಬಾಯಿಂದ ಬಾಯಿಗೆ ಹರಡುವ ಶಿಫಾರಸ್ಸಿನಿಂದ ಬೇರೆ ಮನೆಗಳ ಕೆಲಸ ಸಿಗಬೇಕಾಗಿರುವ ಈ ಫ್ರೀ ಲಾನ್ಸರ್ ಮನೆಗೆಲಸದವರಿಗೆ ತಮ್ಮ ಪ್ರಾಮಾಣಿತೆಯನ್ನುಳಿಸಿಕೊಳ್ಳುವುದರ ಬಗ್ಗೆ, ಹಾಗೂ ತಮ್ಮ ಕಾರ್ಯಕ್ಷಮತೆಯ ಬಗ್ಗೆ ಅತ್ಯಂತ ಕಾಳಜಿ! ಸರಿಸುಮಾರಾಗಿ ನಮ್ಮ ದಕ್ಷಿಣ ಭಾರತದ ಅನೇಕ ಸ್ಥಳಗಳಲ್ಲೂ ಇದೇ ರೀತಿ ಯಾವ ಏಜೆನ್ಸಿಯ ಮೂಲಕವಾಗಿ ಬರದೆ, ಫ್ರೀ ಲಾನ್ಸರ್‌ಗಳಾಗಿಯೇ ಮನೆಗೆಲಸಕ್ಕೆ ಬರುವ ಪದ್ಧತಿಯೇ ಹೆಚ್ಚಿದ್ದರೂ, ನಮ್ಮವರಿಗೇಕೆ ಇದೇ ರೀತಿಯ ಪ್ರಾಮಾಣಿಕತೆಯನ್ನು ಮೆರೆಯಲು, ಮತ್ತು ಈ ರೀತಿಯ ಕಾರ್ಯನಿಷ್ಠೆಯನ್ನು – ಅದು ಎಂಥಹ ಸಾಮಾನ್ಯ ಕೆಲಸವಾಗಲೀ – ಅಳವಡಿಸಿಕೊಳ್ಳಲು – ಸಾಧ್ಯವಾಗಿಲ್ಲ ಹೇಳಿ!?!

ನಮ್ಮಲ್ಲಿನ ಬಡತನವೇ? ಆಲಸ್ಯವೇ? ನಿರಕ್ಷರತೆಯೇ? ಉಷ್ಣವಲಯದ ನಮ್ಮಲ್ಲಿಯ ತಾಪಮಾನದ ಗುಣವೇ? ಅಥವಾ ಶತಮಾನಗಳಿಂದ ನಮ್ಮ ರಕ್ತದಲ್ಲೇ ಹರಿದು ಬಂದಿರಬಹುದಾದ ಅಪ್ರಾಮಾಣಿಕತೆಯ ವಿಜೃಂಭಿಸುವಿಕೆಯೇ? ಏನೋಪ್ಪ, ನನಗಂತೂ ಇದ್ಯಾವುದಕ್ಕೂ ಉತ್ತರ ತೋಚ್ತಿಲ್ಲ...

ನಾನೀಸಲ ವಾಪಸ್ಸಾದ ಮೇಲೆ ನಮ್ಮ ನಿಂಗಮ್ಮನಿಗೆ ಇದನ್ನೆಲ್ಲಾ ಹೇಳಬೇಕೊಂತಿದ್ದೀನಿ, ನೋಡೋಣ ಅದರಿಂದೇನಾದರೂ ಕಿಂಚಿತ್ ವ್ಯತ್ಯಾಸವಾಗುತ್ಯೇಂತ!

ಆದರೆ, ಇಲ್ಲಿರುವ ನಮ್ಮವರೆಲ್ಲಾ ಮಾತ್ರ – ''ನೋಡೂ, ನಿನ್ನ ಮುಖಕ್ಕೆ ಮಾಸ್ಕ್ ಹಾಕ್ಕೊಂಡು, ದಿನಕ್ಕೆರಡು ಇನ್ಸಿಡಾಲೋ, ಒಂದು ಅಲೆಗ್ರಾನೋ ನುಂಗಿ, ತಿಂಗಳಾನುಗಟ್ಟಲೆಯಿಂದ ನಿಮ್ಮನೆಯಲ್ಲಿ ಕಟ್ಟಿರಬಹುದಾದ ಇಲ್ಲಣ, ಧೂಳುಗಳನ್ನ ನೀನೇ ತೆಗೆಯುಕ್ಕೆ ರೆಡಿಯಾಗಿದ್ರೆ ಮಾತ್ರ ಹೇಳ್ಕೋ,... ಅಷ್ಟು ಬೇಕಾಗಿದ್ದರೆ'' – ಅಂತ ಹೆದ್ರಿಸ್ತಿದ್ದಾರಲ್ಲ, ನೋಡಿ!....

✵

# ನೀರಾ ರಾಡಿಯ ಕತೆ

**- ನಾಗೇಶ ಹೆಗಡೆ**

ಕಮ್ಮಾರನ ಗುಡಿಸಲು ಇನ್ನೂ ಇನ್ನೂರು ಮೀಟರ್ ದೂರ ಇತ್ತು. ಇಲ್ಲೇ ನಿಲ್ಲಿಸಿ ಕಾರನ್ನ...! ಮುಂದಕ್ಕೆ ನಡೆದೇ ಹೋಗಿ ಎಂದಳು ಶ್ರೀಮತಿ.

ಅಲ್ವೆ! ಮಚ್ಚು ಹಿಡಿದು ಈ ಬಿಸಿಲಲ್ಲಿ ಅಷ್ಟು ದೂರ ಹೋಗಬೇಕಾ? ನಾನೇನು ಕೊತ್ವಾಲನ ಬಂಟ್ನಾ? ಕೇಳಿದೆ.

ಮತ್ತೆ, ಕಾರಿನಲ್ಲಿ ಅವನ ವರ್ಕ್‌ಶಾಪ್‌ವರೆಗೂ ಹೋದರೆ ಸುಮ್ನೆ ಬಿಡ್ತಾನಾ? ಮೂರು ಪಟ್ಟು ಜಾಸ್ತಿ ಕೂಲಿ ವಸೂಲಿ ಮಾಡ್ತಾನೆ. ಅದೆಲ್ಲ ಬ್ಯಾಡ, ನಡ್ಕೊಂಡೇ ಹೋಗಿ – ಈ ಬಾರಿ ಕಟ್ಟಾಜ್ಞೆ ಥರಾನೇ ಬಂತು.

ಈ ಹೆಂಗಸರಿಗೆ ಕಾರಿನ ಚಾಲನೆ ಗೊತ್ತಿಲ್ಲದಿದ್ದರೂ ಪಾರ್ಕಿಂಗ್ ನಿಯಮಗಳು ಚೆನ್ನಾಗಿ ಗೊತ್ತಿರುತ್ತವೆ. ಯಾರ್‍ಯಾರ ಮನೆಯ ಗೇಟಿನವರೆಗೂ ಕಾರಲ್ಲಿ ಹೋಗಬೇಕು, ಯಾವಯಾವ ಅಂಗಡಿ ಎದುರು ನಿಲ್ಲಿಸಬೇಕು/ಬಾರದು, ಹಣ್ಣು ತರಕಾರಿ ಮಾರುವವರ ಬಳಿ ಎಂದೂ ಯಾಕೆ ನಿಲ್ಲಿಸಬಾರದು ಇ.ಇ..

ಆದರೆ ಇಲ್ಲಿ ಕಮ್ಮಾರನ ಗುಡಿಸಲು ಬಿಟ್ಟರೆ ಸುತ್ತ ಕೂಗಳತೆಯಲ್ಲಿ ಬೇರೆ ಮನೆಗಳೇ ಇಲ್ಲ. ನಾನು ಕೈಯಲ್ಲಿ ಬೀಸುಗತ್ತಿ ಹಿಡಿದು ಹೋದರೆ ಆತನಿಗೆ ಸಂಶಯ ಬರೋದಿಲ್ವಾ? ಈ ವ್ಯಕ್ತಿ ಎಲ್ಲಿಂದ ಬಂದ, ಹೇಗೆ ಬಂದ ಅಂತ ಅತ್ತಿತ್ತ ನೋಡೇ ನೋಡುತ್ತಾನೆ. ದೂರದಲ್ಲಿ ಕಾರು ನಿಲ್ಲಿಸಿದ್ದು ಅವನಿಗೆ ಕಾಣುತ್ತದೆ. ಕಾರು ಪಂಕ್ಚರ್ ಆಯ್ತಾ? ಅಂತ ಕೇಳ್ತಾನೆ.

ಇಷ್ಟೆಲ್ಲ ವಿವರಣೆಯನ್ನು ಕೊಟ್ಟ ಮೇಲೆ ಮೇಡಮ್ ಬಾಯಿಗೆ ಬ್ರೇಕ್ ಬಿತ್ತು. ಬ್ರೇಕ್ ಬಿದ್ದಿದ್ದ ಕಾರಿಗೆ ಚಾಲನೆ ಬಂತು. ಕಮ್ಮಾರನ ಗುಡಿಸಲವರೆಗೂ ಕಾರು ಬಂತು.

ಮಚ್ಚನ್ನು ಒಮ್ಮೆ ಎತ್ತಿ ನೋಡಿ ಇದಕ್ಕೆ 50 ರೂಪಾಯಿ ಎಂದ.

ಇಲ್ಲ, ಮಾರೋಕೆ ತಂದಿಲ್ಲಪ್ಪಾ! ಸಾಣೆ ಹಿಡಿದು ಕೊಡು ಸಾಕು ಎಂದೆ. ಅದಕ್ಕೇರೀ 50 ರೂಪಾಯಿ! ಖರೀದಿಗಾದರೆ ಇದೇನು 20 ರೂಪಾಯಿನೂ ಬಾಳಲ್ಲ ಎಂದ.

ಅಲ್ಲಯ್ಯಾ, ಹಿಂದಿನ ಬಾರಿ ಸಾಣೆ ಹಿಡಿಯೋಕೆ ಬರೀ ಹತ್ತು ರೂಪಾಯಿ ತಗೊಂಡಿದ್ಯಲ್ಲ? ಆಗ ಹರಿತ ಮಾಡಿದ ಕತ್ತಿಯನ್ನು ಒಮ್ಮೆಯೂ ಬಳಸಲೇ ಇಲ್ಲ, ಮತ್ತೆ ಮೊಂಡಾಗಿದೆ.... ಎಂದೆ.

ಈ ಕತ್ತಿ ವಿಷಯ ಹೇಗಂದ್ರೆ ಅದನ್ನು ದಿನವೂ ಬಳಸುತ್ತಲೇ ಇದ್ದರೆ ಮಾತ್ರ ಅದು ತೆಂಡೂಲ್ಕರ್ ಥರಾ ಶೈನ್ ಆಗ್ತಾನೇ ಇರುತ್ತದೆ; ಇಲ್ಲಾಂದರೆ ವಿನೋದ್ ಕಾಂಬ್ಳಿ ಥರಾ. ಯೂಸ್ ಇಟ್ ಆರ್ ಲೂಸ್ ಇಟ್.


ಕಮ್ಮಾರ ಮಚ್ಚನ್ನು ಅತ್ತಿತ್ತ ಹೊರಳಿಸುತ್ತ ಮತ್ತೆ ನನ್ನತ್ತ ನೋಡಿದ. ನಾನು ಕೆಎಸ್‌ನ ಕವನವನ್ನು ನೆನಪಿಸಿಕೊಳ್ಳುತ್ತ, ತಿದಿಯೂ ನಿನ್ನದೆ, ಇದ್ದಿಲು ನಿನ್ನದೆ, ಏರದಿರಲಿ ಬೆಲೆಯೂ ಎಂದು ಮನದಲ್ಲೇ ಹಾರೈಸುತ್ತಿದ್ದೆ. ಕಮ್ಮಾರ ತನ್ನ ಇನ್‌ಪುಟ್ (ಕಾಷ್ಠ)ದ ಕಾಸ್ಟ್ ಎಲ್ಲಾ ಪ್ರವರ ಹೇಳುತ್ತ ಹೋಗ್ಲಿ 40 ಕೊಡಿ; ಸಂಜೆ ಬನ್ನಿ, ಮಾಡಿಡ್ತೇನೆ ಎಂದ.

ದಿಸ್ ಮಚ್ ಈಸ್ ಕಾಸ್ಟಿಂಗ್ ಅಸ್ ಟೂ ಮಚ್ ಎಂದು ಪತ್ನಿ ಗೊಣಗುಟ್ಟುತ್ತಿರುವಾಗ, ನಾನು ಡ್ರೈವರ್ ಸೀಟಿನಲ್ಲಿ ಕೂತು ಕಿಸೆಯಿಂದ ಸಾಮಾನು ಪಟ್ಟಿಯನ್ನು ತೆಗೆದು ಮತ್ತೊಮ್ಮೆ ನೋಡಿದೆ. ಸೆಣಬಿನ ದಾರ, ಏಣಿ, ಒಂದು ಕಿಲೊ ಸುಣ್ಣ ಮತ್ತು ಮಣ್ಣಿನ ಮಡಕೆ ಈ ನಾಲ್ಕು ಐಟಮ್ ಹೊಂದಿಸಿಕೊಂಡರೆ ನಾಳೆಯೇ ನಮ್ಮ ತೆಂಗಿನ ಮರದಿಂದ ನೀರಾ ಇಳಿಸಬಹುದು.

ಎಲ್ಲಾ ಬಿಟ್ಟ ಭಂಗೀ ನೆಟ್ಟ ಎಂದು ಸೇಂದಿ ಇಳಿಸಲು ಹೊರಟ ಈ ನನ್ನನ್ನು ಬಯ್ದುಕೊಳ್ಳಬೇಡಿ. ಖಂಡಿತ ಸೇಂದಿ ನನ್ನ ಟಾರ್ಗೆಟ್ ಅಲ್ಲವೇ ಅಲ್ಲ. ನನ್ನ ಆಸಕ್ತಿ ಏನಿದ್ದರೂ ನೀರಾಕ್ಕೆ ಸೀಮಿತ. ತೆಂಗಿನ ಮೊಗ್ಗಿನ ತುದಿಭಾಗವನ್ನು ಹರಿತ ಕತ್ತಿಯಲ್ಲಿ ಕತ್ತರಿಸಿ ಸಂಜೆಗೆ ಅದಕ್ಕೆ ಮಡಕೆ ಕಟ್ಟಬೇಕು; ರಾತ್ರಿಯೆಲ್ಲ ತೊಟ್ಟಿಕ್ಕುವ ರಸ (ನೀರಾ)ವನ್ನು ನಸುಕಿನಲ್ಲಿ ಇಳಿಸಬೇಕು; ಅದು ಅಮೃತ ಸಮಾನ ದ್ರವ. ಆದರೆ ಹೊತ್ತು ಏರಿದಂತೆ ಅದು ಹುಳಿಯಾಗುತ್ತ ಹನ್ನೆರಡರ ಹೊತ್ತಿಗೆ ಹುಳಿ ಹೆಂಡವಾಗುತ್ತದೆ. ಚುಮುಚುಮು ಬೆಳಿಗ್ಗೆನೇ ಒಂದಿಷ್ಟು ಈ ಅಮೃತವನ್ನು ಕುಡಿದು ಮಿಕ್ಕಿದರೆ ಅದನ್ನು ಬೆಲ್ಲ ಮಾಡಬಹುದು. ಉತ್ಕೃಷ್ಟ ಬೆಲ್ಲ, ಆಯುರ್ವೇದ ಔಷಧಗಳಲ್ಲಿ ಇದನ್ನೇ ಬಳಸುತ್ತಾರೆ ಎಂದು ಕೃಷ್ಣಮೂರ್ತಿ ಬೆಳಗೆರೆ ಹೇಳಿದ್ದು ನೆನಪಾಯಿತು.

ನಿಜ ಹೇಳಬೇಕೆಂದರೆ ನೀರಾ ಬೆಲ್ಲದ ಐಡಿಯಾ ಕೊಟ್ಟಿದ್ದೇ ಅವರು. ನಮ್ಮ ತೋಟಕ್ಕೆ ನುಸಿಪೀಡೆ ಬಾರದಂತೆ ಮಾಡಲು ನೀರಾ ಇಳಿಸೋದೇ ಏಕೈಕ ಉಪಾಯವೆಂದೂ ಅದರಿಂದ ಬೆಲ್ಲ ಮಾಡಿ ಮಾರಿದರೆ ತೆಂಗಿನ ಕಾಯಿ, ಕೊಬ್ಬರಿ, ಎಣ್ಣೆ ಇತ್ಯಾದಿಗಿಂತ ಲಾಭಕರವೆಂದೂ ಅವರು ಹೇಳಿದ್ದರು. ತಿಪಟೂರಿನ ಬೈಫ್ ಸಂಸ್ಥೆಯವರು ತಮಿಳುನಾಡಿನಿಂದ ಅಮ್ಮಾಳ್ ಹೆಸರಿನ ಅಜ್ಜಿಯೊಬ್ಬಳನ್ನು ಕರೆಸಿ, ಆಕೆಯಿಂದ ನೀರಾಬೆಲ್ಲ ತಯಾರಿಸುವ ಪ್ರಾತ್ಯಕ್ಷಿಕೆ ಪಡೆದಿದ್ದರ ಚಿತ್ರಣವನ್ನೂ ಬಾಯಲ್ಲಿ ನೀರಾ ಊರುವಂತೆ ಅವರು ವರ್ಣಿಸಿದ್ದರು.

ಮನೆಯಲ್ಲಿ ಈ ವಿಚಾರವನ್ನು ಚರ್ಚಿಸದೆ (ಪರಿಣಾಮ ಏನಾಗುತ್ತದೆಂದು ಗೊತ್ತಿತ್ತು) ರಹಸ್ಯವಾಗಿ ಬ್ಲೂಪ್ರಿಂಟ್ ತಯಾರಾಯಿತು. ಮರಗಳನ್ನು ಆಯ್ಕೆ ಮಾಡಿ, ಅವುಗಳ ಎತ್ತರದ ಅಜಮಾಸು ಪಡೆದ ನಂತರ ಏನೇನು ಸಾಮಗ್ರಿ ತರಬೇಕೆಂಬ ಪಟ್ಟಿ ಸಿದ್ಧವಾಯಿತು. ತೊಂದರೆ ಏನೆಂದರೆ ಈ ಯಾವ ಐಟಮ್ಮೂ ಹಳ್ಳಿಯಲ್ಲಿ ಈಗ ಸಿಗುತ್ತಿಲ್ಲ. ಕರೀಕಪ್ಪು ಮಡಕೆ ಬೇಕೆ, ಬೆಂಗಳೂರಿನ ಪಾಟರಿ ಟೌನಿನಲ್ಲಿ ಹುಡುಕಬೇಕು. ಮಡಕೆಯ ಒಳಕ್ಕೆ ದಿನವೂ ಬಳಿಯಲು ಸುಣ್ಣಕ್ಕೆ ಕೋರಮಂಗಲದ ಬಟ್ಟಿಗೆ ಹೋಗಬೇಕು. ಏಣಿ ಬೇಕೆಂದರೆ ಫ್ರೇಸರ್ ಟೌನ್‌ನ ಬಂಬೂ ಬಝಾರಿಗೆ ಹೋಗಬೇಕು. ಕೊನೆಗೆ ಮರ ಏರಲು ಕೂಲಿಯವನನ್ನೂ ಕಳಾಸಿಪಾಳ್ಯದಲ್ಲೇ ಹುಡುಕಬೇಕು. ಯಾಕೊ ಏನೊ, ಸೇಂದಿ ಇಳಿಸುವ ಎಲ್ಲ ವ್ಯವಸ್ಥೆಗಳೂ ತೆಂಗಿನಮರಗಳೂ ಬೆಂಗಳೂರಿನಲ್ಲೇ ಇವೆಯಾದರೂ ಎಲ್ಲರೂ ಬಾರಿಗೇ ಮುಗಿ ಬೀಳುತ್ತಾರೆ.



ಕಮ್ಮಾರನ ಬಳಿ ಕತ್ತಿಯನ್ನು ಹರಿತ ಮಾಡಿಸಿ ತಂದ ನಂತರ ಒಂದೇ ವಾರದಲ್ಲಿ ಇತರ ಎಲ್ಲ ಪರಿಕರಗಳೂ ಬಂದವು. ಏಣಿ ಮಾತ್ರ ಬಂದಿರಲಿಲ್ಲ. ಏಣಿ ಮಾಡಲು ನಾಲ್ಕು ದಿನ ಬೇಕೆಂತಲೂ ಅದು ರೆಡಿ ಆದ ತಕ್ಷಣ ಫೋನ್ ಮಾಡುತ್ತೇನೆಂದೂ ಮೇದರ ಕಣ್ಣಪ್ಪ ಹೇಳಿದ್ದ. ಕರೀ ಮಡಕೆಯನ್ನು ನೋಡಿ ಮಡದಿಯ ಕಣ್ಣು ತುಸು ಕೆಂಪಾಗಿತ್ತು. ಇದೇನು ಅವಲಕ್ಷಣ! ಕೆಂಪೇ ಚೆನ್ನಾಗಿತ್ತು. ಅದರಲ್ಲಿ ನೀರು ತುಂಬಿಸಿ ಇಟ್ಟರೆ ಫ್ರಿಜ್‌ನಲ್ಲಿ ಇಟ್ಟಷ್ಟು ತಂಪಾಗಿರುತ್ತದೆ ಎಂದಳು.

ನಸುಕಿನ ಆರು ಗಂಟೆಗೇ ಎದ್ದು ನಮ್ಮೂರಿನ ನೈಟ್‌ಹಾಲ್ಟ್ ಬಸ್ಸು ನಿಂತಿರುವಲ್ಲಿ ಹೋದೆ. ಈ ಹಳ್ಳಿಯ ಒಂದೊಂದು ಮನೆಯಿಂದಲೂ ಒಬ್ಬರು ಇಬ್ಬರು ದಿನವೂ ಬೆಳಿಗ್ಗೆ ಏಳಕ್ಕೆ ಬಸ್ ಏರಿ, ಸಿಟಿ ಮಾರ್ಕೆಟ್‌ನಲ್ಲಿ ಇಳಿಯುವ ಹೊತ್ತಿಗೆ ವೇಷ ಬದಲಿಸಿಕೊಳ್ಳುತ್ತಾರೆ. ಕೆಲವರು ಮೇಸ್ತ್ರಿಗಳಾಗುತ್ತಾರೆ, ಇಸ್ತ್ರಿಯವರಾಗುತ್ತಾರೆ, ತಳ್ಳುಗಾಡಿಯ ಮಾಲಿಕರಾಗುತ್ತಾರೆ, ಡ್ರೈವರ್‍ರಾಗುತ್ತಾರೆ, ವಾರ್ಡ್‌ಬಾಯ್ ಆಗುತ್ತಾರೆ, ಗೇಟ್‌ಕೀಪರ್‍ರಾಗುತ್ತಾರೆ. ಕೂಲಿಗಳಾಗುತ್ತಾರೆ, ತೆಂಗಿನಮರ ಕ್ಲೀನ್ ಮಾಡಬಲ್ಲ ನಿಪುಣರೂ ಆಗುತ್ತಾರೆ.

ಅಂಥ ನಿಪುಣನನ್ನು ಪತ್ತೆ ಹಚ್ಚಿ, ನಮ್ಮ ತೋಟಕ್ಕೆ ಮುಂದಿನ ವಾರ ಬರುವಂತೆ ಹೇಳಿ ಮನೆಗೆ ಬಂದಾಗ ಆಘಾತ ಕಾದಿತ್ತು.

ಹೊಚ್ಚ ಹೊಸ ಮಡಕೆಯ ಚೂರುಗಳು ಹಿತ್ತಿಲಲ್ಲಿ ಚೆಲ್ಲಾಪಿಲ್ಲಿ ಬಿದ್ದಿದ್ದವು. ಅದರೊಳಗಿಟ್ಟಿದ್ದ ಸುಣ್ಣದ ಪ್ಯಾಕೆಟ್ ಚಿಂದಿಯಾಗಿ ಸುತ್ತೆಲ್ಲ ಹಸಿರು ಹುಲ್ಲಿನ ಮೇಲೆ ಕಪ್ಪು-ಬಿಳಿ ರಾಡಿಯಾಗಿತ್ತು. ನಮ್ಮ ನಾಯಿ ಕಾಫಿಯೂ ಕುಯ್ಯೆಂದು ಮುಲುಗುತ್ತ ಮಲಗಿತ್ತು. ಪುಣ್ಯಕ್ಕೆ ಮೇಡಮ್ ಕೋಪ ಅಷ್ಟೊತ್ತಿಗೆ ಇಳಿದಿತ್ತು. ತಣ್ಣಗೆ ಆಕೆಯಿಂದ ವಿವರಣೆ ಬಂತು: ತೆಂಗಿನ ಕಾಯಿ ಅಷ್ಟೆಲ್ಲ ಮಹತ್ವದ್ದು. ಎಷ್ಟೆಲ್ಲ ಗೆಸ್ಟ್‌ಗಳಿಗೆ ಎಳನೀರು, ಕೊಬ್ಬರಿ ಉಚಿತವಾಗಿ ಕೊಟ್ಟಿದ್ದೇವೆ. ನೀರಾ ಕಟ್ಟೋಕೆ ಅಂತ ಇನ್ನುಮೇಲೆ ಚಿಕ್ಕದೊಡ್ಡ ಎಲ್ಲ ತೆಂಗಿನ ಕಾಯಿಗಳನ್ನೂ ಕೆಡವಿ ಬಿಸಾಕಬೇಕು. ಚಟ್ನಿಗೂ ಒಂದು ಕೊಕೊನಟ್ ಇರುವುದಿಲ್ಲ. ದಿನವೂ ನೀರಾ ಇಳಿಸೋರು ಯಾರು? ನೀವಂತೂ ಹತ್ತು ಗಂಟೆಗೆ ಏಳೋರು. ಅಷ್ಟೊತ್ತಿಗೆ ಮರದ ಮೇಲಿಂದ ತೊಟ್ಟಿಕ್ಕೋ ಸೇಂದಿಗೆ ಬಾಯಿ ಕೊಡೋಕಾ ಇಷ್ಟೆಲ್ಲ ಮಾಡ್ತಿರೋದು...

ನನ್ನ ಬಾಯಿ ಕಟ್ಟಿತ್ತು. ಒಂಥರಾ ಒಣಗಿತ್ತು ಅನ್ನಿ. ಆದರೂ ಸಾವರಿಸಿಕೊಂಡು, ನಿನಗೆ ಯಾರು ಹೇಳಿದರು ಈ ನೀರಾ ವಿಚಾರಾನ? ಕೇಳಿದೆ.

ಏಣಿ ತಯಾರಾಗಿದೆಯಂತೆ, ಆ ಮೇದರ್ ಫೋನ್ ಮಾಡಿದ್ದ. ಅದೇನೋ ನೀರಾ ಇಳಿಸೋಕೆ ಅಂತ ಸ್ಪೆಶಲ್ ಲ್ಯಾಡರ್ ಮಾಡಿದ್ದಾನಂತೆ. ಗೋ ಅಂಡ್ ಫೆಚ್ ಯುವರ್ ಲ್ಯಾಡರ್ ಅಂಡ್ ಜಂಕಿಟ್ ದೇರ್ –ಸಿಡಿಗುಂಡಿನಂತೆ ಬಂತು ಉತ್ತರ.

ಈಗ ಗೊತ್ತಾಯಿತು, ಒಂದು ಟೆಲಿಫೋನ್ ಕರೆಯಿಂದ ಆದ ಭಾನಗಡಿ ಇದು ಅಂತ.

ಆ ದಿನದ ಪತ್ರಿಕೆಯ ತುಂಬೆಲ್ಲ ನೀರಾ ರಾಡಿಯಾದ್ದೇ ಕತೆ.

✵

---

## ಲೇಖಕರಲ್ಲಿ ವಿನಂತಿ

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.

## ಓದುಗರ ಗಮನಕ್ಕೆ

* ಅಪರಂಜಿ ಚಂದಾ ವಿವರ ಬೇಕೆ?
* ಪತ್ರಿಕೆ ತಲುಪದ ವಿಚಾರ ನಮಗೆ ತಿಳಿಸಬೇಕಿದೆಯೆ?
* ನಮ್ಮ ಪತ್ರಿಕೆಗೆ ಲೇಖನ ಬರೆಯಲಿದ್ದೀರಾ?

ಇಂತಹ ವಿಷಯಗಳ ಬಗ್ಗೆ ಉಪಸಂಪಾದಕರೊಂದಿಗೆ ದೂರವಾಣಿ ಮಾಡಲು ಬಯಸುತ್ತೀರಾ? ಸಂತೋಷ. ಆದರೆ ಬೆಳಗ್ಗೆ 7.00 ರಿಂದ 8.30 ಸಮಯದಲ್ಲಿ ಮಾತ್ರ ಕರೆ ಮಾಡಲು ವಿನಂತಿ. ಉಳಿದ ಸಮಯ ಅವರ ಇತರ ಕೆಲಸಗಳಿಗೆ ಮೀಸಲಾಗಿರುತ್ತದೆ ಎಂಬುದು ನಿಮ್ಮ ನೆನಪಿನಲ್ಲಿರಲಿ.

**ಹಾಗೆಯೇ ಗಮನಿಸಿ:** ನೀವು ದೂರವಾಣಿ ಮಾಡಿದಾಗ ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ, ಅವರೊಂದಿಗೆ ನೇರವಾಗಿ ಮಾತಿಗಿಳಿಯದೆ 'ಉಪಸಂಪಾದಕರು ಇದ್ದಾರೆಯೆ?' ಎಂದು ವಿಚಾರಿಸಿ, ಅವರೊಂದಿಗೆ ಮಾತ್ರ ಮಾತನಾಡುವುದು ಸೂಕ್ತ. ಅವರು ಸಿಗದಿದ್ದರೆ ಅವರು ಲಭ್ಯವಿರುವ ಸಮಯ ತಿಳಿದುಕೊಂಡು ನಂತರ ಕರೆ ಮಾಡಬಹುದು.

ಇದಕ್ಕಿಂತಲೂ ಒಂದು ಸರಳ ವಿಧಾನವಿದೆ. ನಿಮಗೆ ಬೇಕಾದ ಮಾಹಿತಿ ಕೋರಿ ಒಂದು ರಿಪ್ಲೈ ಕಾರ್ಡ್ ಬರೆಯಿರಿ. ಲಿಖಿತ ಉತ್ತರ ಸಿಗುತ್ತದೆ. ಅಂದಹಾಗೆ ನಿಮ್ಮ ವಿಳಾಸ, ಚಂದಾ ಸಂಖ್ಯೆ ತಿಳಿಸಲು ಮರೆಯದಿರಿ! ದಯವಿಟ್ಟು ಸಹಕರಿಸಿ.

– ಸಂಪಾದಕರು

# ಗಾರ್ಡನ್‌ನಲ್ಲಿ ಒಂದು ಅಗಸೇ ಗಿಡ.....

**- ಗುರು**

**ನ**ನಗೆ ಹಲವಾರು ಪ್ರಸಂಗಗಳು ತಮಾಷೆ ಅನಿಸಿದವು ಅಂತ ಹೇಳುತ್ತಾ ಇದ್ದೆ. ಅಂತಹ ಮತ್ತೊಂದು ಸಂಗತಿ ತಮಗೆ ಈಗ. ನನಗಿಂತಲೂ ಕೊಂಚ ಹಿರಿಯರಾಗಿದ್ದ ಸಹೋದ್ಯೋಗಿಯೊಬ್ಬರು ಸುಮಾರು ವರ್ಷ ನನ್ನ ಸಂಗಡ ಕಾರ್ಯ ನಿರ್ವಹಣೆ ಮಾಡುತ್ತಾ ಇದ್ದರು. ಅವರೂ ನಾನೂ ಒಂದೇ ಶಿಫ್ಟಿನಲ್ಲಿ ಕೆಲಸ ಮಾಡುತ್ತಾ ಇದ್ದೆವು. ಚೆನ್ನಾಗಿ ಒಗೆದು ಶುಭ್ರಮಾಡಿದ ಬಟ್ಟೆ ತೊಟ್ಟು ಇವರು ಕಾರ್ಖಾನೆಗೆ ಬರುವುದು ಯಾವುದೋ ಮದುವೆ ಮನೇಗೆ ಹೋಗುವ ಹಾಗಿತ್ತು. ಕೆಲಸಕ್ಕೆ ಬಂದ ಕೂಡಲೇ ತಮ್ಮ ಬ್ಯಾಗು ಒಂದು ಕಡೆ ಇಟ್ಟು ಆಚೆ ಹೋಗುವರು. ಹೋಗುತ್ತಾ ಜತೆಯಲ್ಲಿಯೇ ಒಂದು ಸೋಪಿನ ಬಾಕ್ಸು ಮತ್ತು ಒಂದು ಟವಲ್ಲು ಜತೆಯಲ್ಲಿರುತ್ತಿತ್ತು. ಸೋಪು ಮತ್ತು ಟವಲ್ಲನ್ನು ಇವರು ಒಂದು ಪ್ರತ್ಯೇಕ ಕಬೋರ್ಡಿನಲ್ಲಿ ತುಂಬಾ ಜಾಣತನದಿಂದ ಇರಿಸಿರುತ್ತಿದ್ದರು. ನೇರ ಬಾತ್ ರೂಮಿಗೆ ನಡೆದು ಅಲ್ಲಿ ಒಂದು ವಾಷ್ ಬೇಸಿನ್‌ನ ಮುಂದೆ ನಿಲ್ಲುವರು. ಬೇಸಿನ್ನಿಗೆ ಹತ್ತು ನಿಮಿಷ ನೀರು ಹರಿಸಿ ಅದರ ಸುತ್ತ ಮುತ್ತ ತೊಳೆಯುವರು. ಸೋಪಿನಿಂದ ಕೈ ತೊಳೆದು ಟವಲ್ಲಿನಿಂದ ಕೈ ಒರೆಸಿಕೊಂಡು ಶುಭ್ರವಾಗಿ ಬರುವರು. ಇವರು ಕೂಡುವ ಸೀಟಿನ ಹಿಂದೆಯೇ ಆರು ಅಡಿಗಳಷ್ಟು ಜಾಗದಲ್ಲಿ ಒಂದು ಹಗ್ಗ ಉದ್ದಕ್ಕೆ ಕಟ್ಟಿರುತ್ತಿದ್ದರು. ಅದರ ಮೇಲೆ ಟವಲ್ಲು ಒಣಗಲು ಹಾಕಿ, ನಂತರ ಬ್ಯಾಗು ತೆರೆದು ಅದರಿಂದ ವಸ್ತುಗಳನ್ನು ಎದುರಿನ ಟೇಬಲ್ಲಿನ ಮೇಲೆ ಹರವುತ್ತಿದ್ದರು. ಒಂದು ಕ್ಯಾರಿಯರು, ಐದೋ ಆರೋ ಕರ್ಚೀಫುಗಳು, ಒಂದು ಪೌಡರಿನ ಡಬ್ಬ, ಒಂದು ಸ್ನೋ ಡಬ್ಬ, ಅಮೃತಾಂಜನದ ಸೀಸೆ... ಹೀಗೆ ಅವರ ಟೇಬಲ್ಲಿನ ಮೇಲೆ ವಿರಾಜಮಾನವಾಗುತ್ತಿತ್ತು.

ಮೊದಲು ಕ್ಯಾರಿಯರು ಬಿಚ್ಚುವರು, ಅದರಲ್ಲಿ ನಾಲಕ್ಕು ಒಂದೇ ಸೈಜಿನ ಬಟ್ಟಲುಗಳು. ಮೊದಲನೇ ಬಟ್ಟಲು ತೆರೆದು ಸ್ಪೂನಿನಿಂದ ಅದರಲ್ಲಿರುವ ತಿಂಡಿ ತಿನ್ನುವರು. ನಂತರ ಅದನ್ನು ತೆಗೆದುಕೊಂಡು ತೊಳೆಯಲು ಹೋಗುವರು- ಮತ್ತೆ ವಾಷ್ ಬೇಸಿನ್ ತೊಳೆದು ಡಬ್ಬಿ ತೊಳೆದು ಸಂಗಡ ತಂದಿದ್ದ ಕರ್ಚೀಫುಗಳನ್ನು ಸೋಪು ಹಾಕಿ ಉಜ್ಜಿ ತೊಳೆದು ಕೆಲಸದ ಜಾಗಕ್ಕೆ ಹಿಂತಿರುಗುವುದು, ಕರ್ಚೀಫುಗಳನ್ನು ಒಣಹಾಕಿ ಡಬ್ಬಿ ಮುಚ್ಚಿಟ್ಟು ತಮ್ಮ ದೈನಂದಿನ ಕೆಲಸದ ಕಡೆ ನಿಗಾವಹಿಸುವುದು... ಇದು ಮೊದಲ ಗಂಟೆಯ ಕೆಲಸವಾದರೆ ಎರಡನೇ ಗಂಟೆಗೆ ಎರಡನೇ ಡಬ್ಬಿ ಓಪನ್ನು, ಮತ್ತು ಮೊದಲಿನ ಕೆಲಸ ರಿಪೀಟು !

ಮೂರನೇ ಗಂಟೆಗೆ ಇವೆಲ್ಲವೂ ಮತ್ತೆ ಪುನರಾವರ್ತನೆಯಾಗುತ್ತಿತ್ತು. ಮಧ್ಯಾಹ್ನ ಊಟದ ನಂತರ ಅಮೃತಾಂಜನದ ಡಬ್ಬಿ ತೆರೆದು ಮುಲಾಮನ್ನು ಹಣೆಗೆ ಹಚ್ಚಿ ಹತ್ತು ನಿಮಿಷ

ಹಾಯಾಗಿ ಕಣ್ಣು ಮುಚ್ಚುವರು. ಮನೆಗೆ ಹೊರಡುವ ಸಮಯ ಹತ್ತಿರ ಬರುತ್ತಿದ್ದಂತೆ ಮತ್ತೆ ಕೈ ತೊಳೆಯುವ ಕೆಲಸ ಆರಂಭವಾಗುತ್ತಿತ್ತು. ಈಗ ಒಂದು ಅಡಿಷನ್ ಎಂದರೆ ಮುಖಕ್ಕೆ ಸೋಪು ಹಾಕಿ ತೀಡುವುದು, ಸ್ನೋ ಬಳೆದುಕೊಂಡು ಅದರ ಮೇಲೆ ಪೌಡರು ಲೇಪಿಸುವುದು, ಧರಿಸಿದ್ದ ಬಟ್ಟೆಯನ್ನು ಟವಲ್ಲಿನಿಂದ ಧೂಳು ಹೋಗುವ ಹಾಗೆ ಕೊಡವೋದು.

ಮೊದಲ ದಿವಸ ಈ ತಮಾಷೆ ಅನುಭವಿಸಿದೆ. ಪರವಾಗಿಲ್ಲ, ಈ ಹಿರಿಯರು ಯಾವುದೇ ಸಮಯದಲ್ಲೂ ಫೀಲ್ ಅಟ್ ಹೋಂ ತತ್ವ ಪಾಲಿಸುತ್ತಿದ್ದಾರೆ ಎಂದು ಸಂತೋಷಪಟ್ಟೆ. ಆದರೆ ಈ ರೀತಿಯ ಸುಖವನ್ನು ಅನುಭವಿಸುವುದನ್ನು ನಾನು ಕೇಳಿಕೊಂಡು ಬಂದಿಲ್ಲವೇ ಎನ್ನುವ ಕೊರಗೂ ಸುಮಾರು ಸಮಯ ನನ್ನನ್ನು ಕೊರೆದಿದೆ. ಎಂದಿನ ಹಾಗೆ ಈ ತಮಾಷೆಯನ್ನು ಮಿಕ್ಕ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಖುಷಿಯನ್ನೂ ಪಟ್ಟೆ. (ಇವರು ನನ್ನ ಇಲಾಖೆಯಿಂದ ಬೇರೆ ಇಲಾಖೆಗೆ ವರ್ಗವಾಗಿ ಹೋದನಂತರ ಅವರ ಈ ಕೈಂಕರ್ಯಗಳು ಹೇಗೆ ನಡೀತಿವೆ ಎಂದು ತಿಳಿಯಲು ಅವರು ವರ್ಗವಾಗಿ ಹೋಗುವ ಎಲ್ಲಾ ಇಲಾಖೆಗಳಿಗೂ ಭೇಟಿ ಕೊಟ್ಟೆ, ಸರಿ ಸುಮಾರು ಎಲ್ಲಾ ಕಡೆಯೂ ಇವರು ಕೂಡುವ ಕುರ್ಚಿಯ ಹಿಂದೆ ಆರು ಅಡಿಯ ಹಗ್ಗ ಉದ್ದಕ್ಕೆ ನೇತಾಡುತ್ತಿತ್ತು ಮತ್ತು ಕೆಲವು ಸಲ ಅದರ ಮೇಲೆ ಕರ್ಚೀಫುಗಳು, ಟವಲ್ಲೂ ಸಹ ಹರವಿಕೊಂಡಿರುತ್ತಿತ್ತು. ಏನೂ ಪ್ರಾಬ್ಲಮ್ಮುಗಳಿಲ್ಲ, ಎಲ್ಲರೂ ನನ್ನ ಸಿಸ್ಟಮ್ಮಿಗೆ ಹೊಂದಿಕೊಂಡಿದ್ದಾರೆ ಎಂದು ಖುಷಿಯಿಂದ ಹೇಳುತ್ತಿದ್ದರು.) ಸಹೋದ್ಯೋಗಿಯೊಬ್ಬರು ಮತ್ತೊಂದು ಸಂಗತಿಯನ್ನು ಹೇಳಿದರು. ನಮ್ಮ ಗಾರ್ಡನ್ ಇದೆಯಲ್ಲಾ ಅಲ್ಲಿ ಒಂದು ದಿವಸ ಸುಮ್ಮನೆ ವಾಕಿಂಗ್ ಹೋಗಿ ಬಾ.. ಎಂತೆಂತಹ ವಿಚಿತ್ರ ಕಾಣಿಸುತ್ತೆ ಗೊತ್ತಾ?

ಅಪರೂಪದ ಸಂಗತಿಗಳು ಹಾಗೂ ತಮಾಷೆ ವಿಚಾರಗಳನ್ನು ಕಂಡರೆ ಅದನ್ನು ನೋಡಿ ಅನುಭವಿಸುವ ಮನೋಭಾವ ರೂಢಿಯಾಗಿತ್ತು. ಒಂದು ದಿವಸ ನಮ್ಮ ಗಾರ್ಡನ್ನಿಗೆ ಹೆಜ್ಜೆ ಹಾಕಿದೆ. ಮಧ್ಯಾಹ್ನದ ಸಮಯ, ಅಲ್ಲಿ ಒಬ್ಬರು ನನಗೆ ಪರಿಚಿತರು, ಮೈಮೇಲೆ ದ್ವಾದಶ ನಾಮಗಳು, ಮಡಿ ಪಂಚೆ ಉಟ್ಟುಕೊಂಡು ಸೂರ್ಯನಿಗೆ ತರ್ಪಣ ನೀಡುತ್ತಿದ್ದಾರೆ. ಅವರು ಬೆಳಿಗ್ಗೆ ಬರಬೇಕಾದರೆ ಪ್ಯಾಂಟು ಷರ್ಟಿನಲ್ಲಿ ನೋಡಿದ್ದೆ. ಪಂಚೆ ಎಲ್ಲಿಂದ ತಂದರು ಅಂತ ಕುತೂಹಲ ಶುರುವಾಯಿತು. ಅಂದಹಾಗೆ ಕಾರ್ಖಾನೆ ಒಳಗೆ ಪಂಚೆ ತರಲು ಅನುಮತಿ ಇರುವುದಿಲ್ಲ !

ತರ್ಪಣ ಕೊಟ್ಟಾಯಿತು, ಹತ್ತಿರದಲ್ಲಿನ ಮರದ ಬುಡಕ್ಕೆ ಹೋದರು, ಅಲ್ಲಿ ಒಂದು ಬ್ಯಾಗಿನಲ್ಲಿ ಮಡಿಸಿ ಇಟ್ಟಿದ್ದ ಪ್ಯಾಂಟು ಷರಟು ತೆಗೆದರು. ಮಡಿಪಂಚೆಯ ಮೇಲೆಯೇ ಪ್ಯಾಂಟು ಧರಿಸಿದರು. ನಂತರ ಷರಟು ಹಾಕಿಕೊಂಡು ಜತೆಯಲ್ಲಿ ತಂದಿದ್ದ ತಾಮ್ರದ ಚೆಂಬನ್ನು ಬ್ಯಾಗಿನಲ್ಲಿ ಹಾಕಿ ಹೊರಟರು. ಎದುರಿಗೆ ನಾನು ಕಾಣಬೇಕೇ?

ಹ್ಹ ಹ್ಹ ಏನಿಲ್ಲಿ? ಅಂದರು.

ಹಾಗೇ ಸುಮ್ಮನೆ ಬಂದೆ ಅದೇನು ಮಾಡ್ತಿದ್ರಿ? ಅಂತ ಕೇಳಿದೆ, ಬರೀ ಕುತೂಹಲ.

ತ್ರಿಕಾಲ ಸಂಧ್ಯಾವಂದನೆ ಮಾಡ್ತೀನಿ ಅಂತ ನಮ್ಮ ತಂದೆಗೆ ಮಾತುಕೊಟ್ಟಿದ್ದೆ. ಫ್ಯಾಕ್ಟರಿಯಲ್ಲಿ ಅದೆಲ್ಲಾ ಮಾಡುಕ್ಕೆ ಸಾಧ್ಯವೇ? ಅದಕ್ಕೇ ಈ ಸಿಸ್ಟಮ್ಮನ್ನ ಮಾಡಿಕೊಂಡಿದೀನಿ,ಮಡಿಪಂಚೆ ಮೇಲೆ ಪ್ಯಾಂಟು ಹಾಕಿಕೊಂಡು ಬರ್ತೀನಿ.ಯಾರಿಗೂ ತಿಳೀದ ಹಾಗೆ ಧರ್ಮ ನಡೆಸಿಕೊಂಡು ಹೋಗ್ತೀನಿ...

ಇವರ ಶ್ರದ್ಧೆಯ ಬಗ್ಗೆ ಯಾರ ಹತ್ತಿರವೋ ಹೇಳಿದೆ. ಅವರು ರೀ ಅವರು ಗಾರ್ಡನ್‌ನಲ್ಲಿ ಒಂದು ಅಗಸೇ ಗಿಡವನ್ನೂ ಬೆಳೆಸಿದಾರೆ ಗೊತ್ತಾ ಅಂದರು. ಅಗಸೇ ಗಿಡದ ಸೊಪ್ಪು ಏಕಾದಶಿ ನಂತರ ಬೇಕಾಗುತ್ತಂತೆ!

ಸುಮಾರು ಮಡಿವಂತರು ಅವರವರ ಮಡಿ ಕಾನ್ಸೆಪ್ಟನ್ನು ಕಾಪಾಡಿಕೊಂಡು ಬಂದಿರುವುದನ್ನು ನೋಡೀದೀನಿ.ಯಾರನ್ನೂ ಮುಟ್ಟಿಸಿಕೊಳ್ಳದೇ ತಮ್ಮ ತಮ್ಮ ಕೆಲಸವನ್ನು ಮಡಿಯಲ್ಲಿಯೇ ಮಾಡುತ್ತಿದ್ದವರ ಪರಿಚಯವೂ ನಂತರ ಆಯಿತು. ದಿನ ಕಳೆದ ಹಾಗೆ ವಯಸ್ಸಾದ ಹೆಂಗಸರು ಅರ್ಧ ಒಣಗಿದ ಬಟ್ಟೆಯಲ್ಲಿ ಕಾರ್ಖಾನೆಗೆ ಬರುವುದು ನೋಡಿದ್ದೆ. ಪಾಪ ಮನೆಯಲ್ಲಿ ಒದ್ದೆ ಬಟ್ಟೆಯಲ್ಲಿ ಪೂಜೆ ಪುನಸ್ಕಾರ ಮಾಡಿರುತ್ತಾರೆ, ಬಟ್ಟೆ ಬದಲಿಸಲು ಸಮಯ ಸಿಕ್ಕಿರಲಾರದು ಅಂದುಕೊಳ್ಳುತ್ತಿದ್ದೆ. ಹಾಗೇ ನಾನು ನೋಡಿದ ಮತ್ತೊಂದು ವಿಶೇಷವೆಂದರೆ ಸುಮಾರು ಸೀನಿಯರ್ ಮಹಿಳಾ ಉದ್ಯೋಗಿಗಳು ಬಸ್ಸಿನಲ್ಲಿ ಕೂತು ಶ್ಲೋಕದ ಪುಸ್ತಕಗಳನ್ನು ಹಿಡಿದು ಓದುತ್ತಾ ಪುಣ್ಯ ಸಂಪಾದನೆ ಕಾರ್ಯದಲ್ಲಿ ಲೀನವಾಗಿರುವುದು. ಇದು ಈಗ ಎಲ್ಲಾ ಬಸ್ಸುಗಳಲ್ಲಿಯೂ ಸರ್ವೇಸಾಮಾನ್ಯ ಎಂದು ಗೆಳೆಯರು ಹೇಳಿದರು, ಇನ್ನೂ ಹೇಳಬೇಕೂಂದರೆ ವಿಧಾನಸೌಧದ ಸುಮಾರು ಬಸ್ಸುಗಳಲ್ಲಿ ಸಾಮೂಹಿಕ ಪ್ರಾರ್ಥನೆ ಜಪತಪ ಇರುತ್ತದಂತೆ!

ಇದರಲ್ಲಿ ಒಂದು ದೊಡ್ಡ ತಮಾಷೆ ನಾನು ಅನುಭವಿಸಿದ್ದು ಅಂದರೆ ಯಾರಾದರೂ ಉದ್ಯೋಗಿಯೋ ಅಥವಾ ಅವರ ಸಂಬಂಧಿಗಳೋ ಮೃತರಾದಾಗ ಅವರನ್ನು ನೋಡಲು ಹೋಗುತ್ತಿದ್ದೆವು. ಸೋಮವಾರ ಯಾರಾದರೂ ಮೃತರಾದ ಸುದ್ದಿ ಬಂದಾಗ ಕೆಲವರ ಮುಖ ಭಾರೀ ಪೆಚ್ಚಾಗ್ಬಿಬಿಡುತ್ತಿತ್ತು. ಪಾಪ ದುಃಖ ಪಡುತ್ತಿದ್ದಾರೆ ಅಂದುಕೊಳ್ಳುತ್ತಿದ್ದೆ. ನಿಧಾನಕ್ಕೆ ಅವರ ದುಃಖದ ಕಾರಣ ತಿಳಿಯುತ್ತಿತ್ತು. ಒಂದು ವಾರ ಹಾಕುವ ಬಟ್ಟೆ ಒಂದೇ ದಿವಸದಲ್ಲಿ ಒಗೆಯೋ ಹಾಗೆ ಆಯಿತು, ಸಾಯೋರು ಸತ್ತರು ಶನಿವಾರ ಸಾಯಬಾರದಾಗಿತ್ತೇ! ಸಾವಿನ ಮನೆಗೆ ಹೋಗಿಬಂದ ನಂತರ ಸ್ನಾನ ಮುಗಿಸಿ ಬಟ್ಟೆ ಬದಲಾಯಿಸಲೇ ಬೇಕಾಗಿದ್ದು ಸಂಪ್ರದಾಯಸ್ಥರ ಮನೆಯಲ್ಲಿ ಕಡ್ಡಾಯ, ಪಾಪ ಅಂತಹವರಿಗೆ ಈ ತೊಂದರೆ.

ಧರ್ಮ ನಡೆಸಿಕೊಂಡು ಹೋಗ್ತೀನಿ... ಅಂದರಲ್ಲಾ ಇದು ಮುಂದೆ ಚೆನ್ನಾಗಿ ಅರ್ಥವಾಯಿತು. ಶುಕ್ರವಾರಗಳಂದು ಪ್ರಾರ್ಥನೆಗೆ ಅಂತ ಒಂದು ಮೈದಾನದಲ್ಲಿ ವ್ಯವಸ್ಥೆಯಿತ್ತು. ನಿಧಾನಕ್ಕೆ ಹಬ್ಬ ಹರಿದಿನಗಳು ವ್ಯಾಪಕವಾಗಿ ಒಂದು ನಾಡಹಬ್ಬದ ಹಾಗೆ ಆಚರಣೆಗೊಂಡವು. ರಾಮನವಮಿ ದಿವಸ ಪಾನಕ ಫಲಹಾರದ ವಿತರಣೆ ಇದ್ದವು. ಆಯುಧ ಪೂಜೆ ದೊಡ್ಡ ಪ್ರಮಾಣದಲ್ಲಿಯೇ ನಡೆಯುತ್ತಿತ್ತು. ಕಾರ್ಖಾನೆಯ ಪೂಜೆಗಳ ಬಗ್ಗೆಯೇ ಒಂದು ದೊಡ್ಡ ಸರಕು ಇದೆ, ಇನ್ಯಾವಾಗಲಾದರೂ ಅದನ್ನ ತಮಗೆ ಹೇಳುತ್ತೇನೆ.

✵

# ದೇವ್ರ ದಿನಚರಿ

**- ಮದ್ಗೂಸದ್ನ**

**'ಆ** ಮಠದ ದೇವ್ರು' ಅಂದರೆ ಪೀಠಾರೋಹಣ ಮಾಡಿದ ಸಮಯದಲ್ಲಿ ಶ್ರೀ ಶ್ರೀ ಶ್ರೀ ಕಚ್ಚಿದಾನಂದ ಸ್ವಾಮಿಗಳು ಎಂದು ನಾಮಕರಣ ಹೊಂದಿದವರು. ಅವರ ಪೀಠಾರೋಹಣವು ತೇನ್‌ಸಿಂಗಿನ ಎವರೆಸ್ಟ್ ಆರೋಹಣಕ್ಕಿಂತ ಕಠಿಣವಾಗಿತ್ತು. ಕಾರಣ ತೇನ್‌ಸಿಂಗನಿಗಾದರೆ ಹತ್ತಲು ಎವರೆಸ್ಟ್ ಮೊದಲೇ ಇತ್ತು. ಆದರೆ ದೇವ್ರು ತಮ್ಮ ಪೀಠವನ್ನು ತಾವೇ ನಿರ್ಮಿಸಿಕೊಳ್ಳಬೇಕಾದಂತಹ ಪರಿಸ್ಥಿತಿ ಇತ್ತು. ಅವರ ಇಷ್ಟ ದೈವ 'ಸ್ರೀಕೃಷ್ಣ'. ಹಾಗಾಗಿಯೇ ಬಿ.ಎ. ಮುಗಿದು ಕೆಲಸಕ್ಕಾಗಿ ಅಲೆದಾಡುತ್ತಿದ್ದಾಗ ಸರ್ಕಾರಿ ಕೆಲಸಕ್ಕೆ ಇಂಟರ್‌ವ್ಯೂ ಬಂತು. ಅಲ್ಲಿ ಅವರು ಕೇಳಿದ ಲಂಚದ ಹಣ ಕೊಡಲಾಗಲಿಲ್ಲ. ಕೋಪದಿಂದ ಅಂದು ಸಂಜೆಯೇ ಇಂಟರ್‌ವ್ಯೂ ಮಾಡಿದಾತನ ಲಂಚದ ಹಣದಿಂದ ತುಂಬಿದ ಪರ್ಸನ್ನು ಎಗರಿಸಲು ಹೋಗಿ ಅಭ್ಯಾಸವಿಲ್ಲದೆ ಸಿಕ್ಕಿಬಿದ್ದು ಮೂರು ತಿಂಗಳು ಸ್ರೀಕೃಷ್ಣ ಜನುಮ ಸ್ಥಾನದಲ್ಲಿ ವಾಸವಾದಾಗಲೇ ತನ್ನದೇ ಆದ ಒಂದು ಸ್ವಂತ ಪೀಠ ಮಾಡಿಕೊಳ್ಳಲು ಜ್ಞಾನೋದಯವಾದದ್ದು. ಅಲ್ಲೇ ಹೆಣ್ಣು ಖೈದಿಗೆ ನಾನೆ ಕ್ರಿಷ್ಣ ನೀನೇ ರಾಧೆ ರಾಸಕ್ರೀಡೆ ಆಡೋಣ ಬಾ ಎಂದು ಕರೆದು ಜೈಲರ್‌ನಿಂದ ತದುಕಿಸಿಕೊಂಡಾಗಲೇ ಇದು ಸೂಕ್ತ ಸ್ಥಳವಲ್ಲ. ಅದಕ್ಕಾಗೇ ತನ್ನದೇ ಆದ ಸ್ವಂತ ಆಶ್ರಮವೋ ಮಠವೋ ಮಾಡಿಕೊಳ್ಳಬೇಕೆಂದು ಬುದ್ಧಿ ಬಂದದ್ದು. ಅಲ್ಲಿಂದ ಇದ್ದ ಮೂರು ತಿಂಗಳಲ್ಲಿ ಕಲಿತ ಯೋಗಾಸನಗಳು ಹೊರಬಂದಾಗ ಬಹಳ ಉಪಯೋಗವಾದವು. ಶೇವು ಮಾಡಿಸಿಕೊಳ್ಳದೆ ಬಿಟ್ಟಿದ್ದ ದಾಡಿ, ತಲೆಕೂದಲು ಮುಖಕ್ಕೊಂದು ಅದ್ವಿತೀಯ ಕಳೆ ತಂದು ಕೊಟ್ಟಿತು. 'ದಾಡಿ ಇಲ್ಲದವರು ಸ್ವಾಮೀಜಿ, ದಾಡಿ ಬಿಟ್ಟವರು ಗುರೂಜಿ' ಸ್ವಾಮಿಗಿಂತಲೂ ಗುರುವಾಗುವುದೇ ಒಳ್ಳೆಯದೆನಿಸಿತು. ಗುರುವಾದರೆ ಯಾರಿಗೇನು ಗೊತ್ತಿಲ್ಲವೋ ಎಲ್ಲವನ್ನೂ ಹೇಳಿಕೊಡಬಹುದು ಎನ್ನುವ ತೀರ್ಮಾನ ತೆಗೆದುಕೊಂಡರೆ ಅವರ ಆರಾಧ್ಯ ದೇವರು ಅವರನ್ನು ಎಲ್ಲರ ಬಾಯಲ್ಲೂ 'ದೇವ್ರು' ಮಾಡಿಬಿಟ್ಟ. ಇಂದಿಗೂ ಸಹ ಅವರ ಪೂರ್ವಾಶ್ರಮದ ಹೆಸರಾಗಲೀ, ಗುರುವಾಗಿ ಪೀಠಾರೋಹಣ ಮಾಡಿದ ಸಮಯದಲ್ಲಿ ಮರು ನಾಮಕರಣವಾದ ಹೆಸರಾಗಲೀ ಅವರಿಗೆ ನೆನಪೇ ಇಲ್ಲ. ಅವರು ಸ್ಥಾಪಿಸಿಕೊಂಡ ಈ ಮಠದ ಹೆಸರು 'ಆ ಮಠ'. ಕಾರಣ ಅದಕ್ಕೆ ಹೆಸರೇ ಇಡಲಿಲ್ಲ. ಅದು ಎಲ್ಲರ ಬಾಯಲ್ಲೂ ಆಮಠವಾಗಿ ಹೋಯ್ತು. ಇಲ್ಲಿಯ ಮುಖ್ಯ ದೇವರು, ಉಹುಂ ಇದು, ಜಾತ್ಯಾತೀತ, ದೇವರಾತೀತ ಮಠ. ಇಲ್ಲಿ ಯಾವ ದೇವರ ವಿಗ್ರಹ ಪೂಜೆ ಏನೂ ಇಲ್ಲ. ಬರೀ ಭಕ್ತಿ ಕಾಣಿಕೆ ಎರಡೇ ಮುಖ್ಯ. ಆದರೆ ದೇವ್ರು ಮಾತ್ರ ತಮ್ಮ ಆರಾಧ್ಯ ದೇವರಾದ ಸ್ರೀಕ್ರಿಷ್ಣನನ್ನು ತಮ್ಮ ಅಂತಃಪುರದೊಳಗೆ ಪೂಜಿಸುತ್ತಾರೆಂದು ಆತ್ಮೀಯ ಶಿಷ್ಯವೃಂದದಲ್ಲಿ ಸುದ್ದಿ. ಇಂತಹ ದೇವ್ರು ಎದ್ದು ಕಚ್ಚೆ ಸರಿಪಡಿಸಿಕೊಳ್ಳುತ್ತಾ ಶಯನಮಂದಿರದಿಂದ ಹೊರಬರುತ್ತಿರುವಾಗ ಶಿಷ್ಯಕೋಟಿ ಗೋಡೆಗೆ ನೇತು ಹಾಕಿದ್ದ ಮೂವತ್ತೊಂಭತ್ತು ಇಂಚಿನ ಪ್ಲಾಸ್ಮಾ ಟಿ.ವಿ.ಯಲ್ಲಿ ಬದುಕನ್ನು ನೋಡಿ ಆನಂದಿಸುತ್ತಿದ್ದರು. 'ಏನ್ಮಾಡ್ತಾ ಇದೀರೋ'? ಕಣ್ಣಿನ ಗೀಜನ್ನು ತೆಗೆಯುತ್ತಾ ಎಂದಿನಂತೆ ಕೇಳಿದರು ದೇವ್ರು.

‘ಬದುಕನ್ನು ಬಹಳ ಹತ್ತಿರದಿಂದ ಕಣ್ಣು ಬಿಟ್ಟು ನೋಡ್ತಿದೀವಿ ದೇವ್ರೆ’ ಶಿಷ್ಯನೊಬ್ಬ ನುಡಿದ.

‘ಮೂರ್ಖ ಮುಂಡೇವು, ಬದುಕನ್ನು ನೋಡ್ರೋ ಅಂದ್ರೆ ಟಿ.ವಿ.ಯಲ್ಲಿ ಬರೋ ಸೀರಿಯಲ್ಲನ್ನು ಹತ್ತಿರದಿಂದ ಕಣ್ಣು ಬಾಯಿ ಬಿಟ್ಕೊಂಡು ನೋಡ್ತಿವೆ’ ಎಂದುಕೊಂಡು ತಮ್ಮ ಪರ್ಸನಲ್ ಇಟಾಲಿಯನ್ ಟಾಯ್ಲೆಟ್ ಕಡೆ ನಡೆಯುತ್ತಿದ್ದಂತೆ ಮತ್ತೊಬ್ಬ ಕೇಳಿದ ‘ಬುದ್ಧಿ ಬದುಕಾದ್ಮೇಲೆ ಸಾವು, ಅದೇ ಕೊನೆ ಅಲ್ವಾ?’ ಎಂದ. ಬದುಕಾದ್ಮೇಲೆ ಸಾವು ಅದೇ ಕೊನೆ ನಿಜ. ಆದ್ರೆ ಟಿ.ವಿ.ಯ ಈ ಬದುಕಿಗೆ ಕೊನೆಯುಂಟೆ ಎಂದುಕೊಳ್ಳುತ್ತಿದ್ದಂತೆ ಜಠರದಲ್ಲಿದ್ದ ತ್ಯಾಜ್ಯ ವಸ್ತು ಹೊರಹೋಗಲು ತುದಿಯಲ್ಲಿ ನಿಂತು ಹಪಹಪಿಸುತ್ತಿತ್ತು. ಇನ್ನು ತಡಮಾಡಿದರೆ ಅದು ತಡಮಾಡದೆ ಹೊರಬರುವುದೆಂದು ಶೀಘ್ರವಾಗಿ ಒಳಹೊಕ್ಕು ಕದವಿಕ್ಕಿ ಕುಳಿತಾಗ ಜೀವಕ್ಕೆ ಆರಾಮೆನಿಸಿತು. ದೇಹದಲ್ಲಿರುವ ಈ ತ್ಯಾಜ್ಯ ಹೊರಹೋದರೆ ಎಂತಹ ಆನಂದ, ಅದೇ ದೇಹದಲ್ಲಿರುವ ಆತ್ಮ ಹೊರಹೊರಟರೆ ಎಂತಹ ನೋವು. ಮನಸ್ಸಿನಲ್ಲಿ ನಡೆದ ಆಧ್ಯಾತ್ಮದ ಚಿಂತನೆಯನ್ನು ದ್ವಾರದ ಉರಿ ನಂದಿಸಿತು. ‘ಬೆಂಕಿ ಇಟ್ಟಂಗಾಗ್ತಿದೆ ರಾತ್ರಿ ಮಸಾಲೆಯ ಪ್ರಭಾವ’ ಎನಿಸಿತು. ಪಕ್ಕದಲ್ಲಿದ್ದ ನಲ್ಲಿಗೆ ಹಾಕಿದ್ದ ಜೆಟ್ಟಿನಿಂದ ತಣ್ಣಗೆ ಕೊರೆಯುತ್ತಿದ್ದ ನೀರನ್ನು ಹಾಯಿಸಿಕೊಂಡಾಗ ಹಿತವೆನಿಸಿತು. ಅಡಿಗೆಯವನಿಗೆ ನಾಲ್ಕು ಮೆಣಸಿನಕಾಯಿ ಕಡಿಮೆ ಹಾಕಲು ಹೇಳಬೇಕೆಂದು ಕೊಂಡರು. ಮನಸ್ಸಿಗೆ ಬಂದದ್ದನ್ನು ತಕ್ಷಣವೇ ಮಾಡಬೇಕೆಂಬ ಸಿದ್ಧಾಂತ ಅವರದ್ದು. ತಡಮಾಡದೆ ಪಕ್ಕದಲ್ಲಿದ್ದ ಇಂಟರ್‌ಕಾಮ್‌ನಿಂದ ಅಡುಗೆಭಟ್ಟನಿಗೆ ಫೋನಾಯಿಸಿಯೇಬಿಟ್ಟರು. ‘ನಿನ್ನ ಮನೆ ಬಂಗಾರವಾಗ. ನಾಲ್ಕು ಮೆಣಸಿನ ಕಾಯಿ ಕಡ್ಮೆ ಹಾಕಿದ್ರೆ ನಿನ್ನ ಕೈಲಿರೋ ಬೆಳ್ಳಿ ಕಡಗ ಕರಗೋಗ್ತಿತ್ತೇನೋ’ ಪ್ರೀತಿಯಿಂದ ಗದರಿದರು. ‘ತಪ್ಪಾಯ್ತು ದೇವ್ರು, ಮೊನ್ನೆ ರಾತ್ರಿ ನಾಲ್ಗೆಗೆ ಖಾರ ಇರ್ಲೀಂತಂದಿದ್ರಲ್ಲ ಅದ್ಕೆ...’ ರಾಗವೆಳೆದ ಭಟ್ಟ. ‘ಅದು ಮೊನ್ನೆಪ್ಪಾ, ಅವತ್ತು ಔಷಧಿಯಿಂದ ನಾಲ್ಗೆ ಒಗರಾಗಿರುತ್ತೇಂತ ಖಾರ ಇರ್ಲೀಂದೆ. ನೀನು ದಿನಾ ಹಾಗೇ ಹಾಕಿದ್ರೆ ನೆತ್ತಿ ಬ್ರಹ್ಮರಂಧ್ರದಿಂದ ಹೋಗ್ಬೇಕಾದ್ ಪ್ರಾಣ ಇನ್ನೆಲ್ಲೋ ಹೋದಹಾಗಾಗುತ್ತೆ ಅಷ್ಟೆ’ ಎಂದರು. ‘ತಪ್ಪಾಯ್ತು ದೇವ್ರು, ಇವತ್ತಿಂದ ಸರಿ ಮಾಡ್ತೀನಿ’ ಎಂದು ಭಟ್ಟ ಫೋನಿಗೆ ಕೈಮುಗಿದ. ‘ಸರಿ ಹಾಗೇ ಮಾಡು ಇಡ್ಲಾ’ ಎಂದರು. ‘ಇಡಿ ದೇವ್ರೆ’ ಎಂದು ಭಟ್ಟನೂ ಇಟ್ಟ. ನೆನೆ ರಾತ್ರಿ ದೇವ್ರಿಗೆ ಔಷಧಿ ಸೇವನೆ ವರ್ಜ್ಯ, ಕಾರಣ ಗುರುವಾರ. ವಾರಕ್ಕೊಂದಾವರ್ತಿಯಾದರೂ ನಿಲ್ಲಿಸಬೇಕೆಂಬ ಆಪ್ತ ವೈದ್ಯರ ಸಲಹೆ, ಸೂಚನೆ. ಅದಕ್ಕಾಗಿ ಗುರುವಾರದ ಆಯ್ಕೆ. ಆದರೆ ಭಟ್ಟ ನಿತ್ಯ ರಾತ್ರಿ ತೀರ್ಥಂಕರ. ತನ್ನ ನಾಲಿಗೆಗೆ ಬೇಕಾದ ಖಾರವನ್ನು ದೇವ್ರಿಗೂ ಹಾಕಿಬಿಟ್ಟಿದ್ದ.

ದೇಹದ ಒಳಗಿನ ಮಲಿನವನ್ನು ಕಳೆದುಕೊಂಡು ಹೊರಗಿನ ಮಲಿನವನ್ನು ಶುಚೀಕರಿಸಲು ಪಕ್ಕದ ಸ್ನಾನದ ಕೋಣೆಯತ್ತ ನಡೆದರು. ಹದವಾಗಿ ಹಬೆಯಾಡುತ್ತಿದ್ದ ತೊಟ್ಟಿಯಲ್ಲಿ ನೀರು ಘಂ ಎಂದು ವಾಸನೆ ಬೀರುತ್ತಿತ್ತು. ಉಟ್ಟಿದ್ದ ಬಟ್ಟೆ ಕಳಚಿ ನೀರಿಗಿಳಿಯುತ್ತಿದ್ದಂತೆ ಯಾಕೋ ತಿಂಗಳೊಪ್ಪತ್ತಿನಿಂದ ಕಾಣಿಸಿಕೊಂಡಿದ್ದ ಬೆನ್ನಿನ ಬಾಧೆ ಹೆಚ್ಚಾಗಿದೆ ಎನ್ನಿಸಿತು. ಎಣ್ಣೆ ಹಚ್ಚಿಸಿ ಮಸಾಜ್ ಮಾಡಿಸಿಕೊಳ್ಳಬೇಕೆನಿಸಿತು. ಅದ್ಯಾರೋ ಆ ಪುಟ್ಟ ಹುಡುಗಿ ಸುಗಂಧದೆಣ್ಣೆಯನ್ನು ಹಚ್ಚಿ ತುಂಬಾ ಚೆನ್ನಾಗಿ ಮೈಯೆಲ್ಲಾ ಮರ್ಧಿಸಿದಳೆಂದರೆ ಎರಡು ತಿಂಗಳವರೆಗೂ ಹತ್ತುವರ್ಷ

ಚಿಕ್ಕವರಾದಂತೆ ಚಟುವಟಿಕೆಯಿಂದಿರುತ್ತಿದ್ದರು. ಯಾರೋ ಮಾಡಿದ ಪಾಪಕ್ಕೆ ಯಾರಿಗೋ ಶಿಕ್ಷೆ ಎಂಬಂತೆ ಯಾರೋ ಕೆಲವು ಬುದ್ಧಿ ಇಲ್ಲದ ಸ್ವಾಮಿಗಳು ಸಿಕ್ಕಿಬಿದ್ದದ್ದಕ್ಕೆ, ಮೂರು ಹೊತ್ತೂ ಮಠದಲ್ಲೇ ಇರುತ್ತಿದ್ದ ಹೆಣ್ಣು ಶಿಷ್ಯೆಯರು ವಿರಳವಾಗುತ್ತಿದ್ದಾರೆ. ಆವತ್ತೊಂದು ದಿನ ಕೇಳಿದ್ದಕ್ಕೆ ಆ ಸಿನಿಮಾ ಬೆಡಗಿಯಂತಿದ್ದ ಆ ಚೆಲುವೆ ಅವರ ಹೆಸರೇನೋ ಜ್ಞಾಪಕಕ್ಕೆ ಬರುತ್ತಿಲ್ಲ, ತಿಂಗಳೊಪ್ಪತ್ತಾಯಿತಲ್ಲ ಅವಳನ್ನು ನೋಡಿ, ಅದೇನೋ ಹೇಳುತ್ತಾರಲ್ಲ "out of sight is out of mind" ಎಂದು, ಅವಳ ಹೆಸರು ಏನಾದರೂ ಹಾಳಾಗಿ ಹೋಗಲಿ, ಏಕಾಂತದ ಸೇವೆಯಲ್ಲಿದ್ದಾಗ ಏನೆಂದಳು ಅವಳು 'ಬಹುಶಃ ದೇವರಿಗೆ ಇದೇ ನನ್ನ ಕಡೆಯ ಸೇವೆ' ಎಂದಳು. ಮನಸ್ಸಿಗೆ ನೋವಾಯಿತು. ಅವಳ ಆತ್ಮೀಯ ಸೇವೆಯೇ ಅಂತಹದ್ದು. ಅನಂತ ಕಾಲ ಸವಿಯುತ್ತಿರಬೇಕೆನಿಸುವಂತದ್ದು. ಅದಿಲ್ಲದೆ ತಾನಿರಲು ಸಾಧ್ಯವೇ ಇಲ್ಲ ಎನಿಸಿಬಿಟ್ಟಿತು. 'ಹಾಗೇಕನ್ನುವೆ, ನಾನೇನಾದರೂ ತಪ್ಪು ಮಾಡಿದೆನೆ?' ಕಕ್ಕುಲತೆಯಿಂದ ಕೇಳಿದರು. 'ತಪ್ಪು ನಿಮ್ಮದೂ ಅಲ್ಲ, ನನ್ನದೂ ಅಲ್ಲ. ಆ ಹಾಳು ಸಿ.ಸಿ. ಕ್ಯಾಮರಾಗಳದ್ದು. ನನಗೆ ಅದರದ್ದೇ ಭಯ' ಎಂದಳು. ಅಷ್ಟೇನಾ? ನಾನೇನೋಂತ ಹೆದರಿಬಿಟ್ಟೆ, ಸಿ.ಸಿ. ಕ್ಯಾಮರಾ ಅಲ್ಲ ಒಂದು ಸ್ಟಿಲ್ ಕ್ಯಾಮರಾ, ಮೊಬೈಲು ಯಾವುದಕ್ಕೂ ನಮ್ಮ ಮಠದಲ್ಲಿ ಪ್ರವೇಶವಿಲ್ಲ ಗೊತ್ತಾ? ಅದೇನಿದ್ರೂ ಹೊರಗಡೆ ಸೆಕ್ಯೂರಿಟಿ ಹತ್ರಾನೇ ಇಟ್ಟು ಬರ್ಬೇಕು' ಎಂದಳು.

'ಆದ್ರೂ ಈ ತೆಹೆಲ್ಕಾದಂತಾ...' ರಾಗವೆಳೆದಳು ನಾರಿಮಣಿ. ಕೆರಳಿದ ಬುದ್ಧಿಯವರ ಬುದ್ಧಿ ಅವರ ಹಿಡಿತದಲ್ಲೇ ಉಳಿಯಲಿಲ್ಲ. 'ಯಾವನವನು ಹಲ್ಕಾ? ನಮ್ಮ ಇಂತಹ ಪವಿತ್ರವಾದ ಮಠದೊಳಗೆ ಅಂತಹದನ್ನೆಲ್ಲಾ ಮಾಡುವವನು' ಅವಳೂ ಬೆಚ್ಚಿಬೀಳುವಂತೆ ಅಬ್ಬರಿಸಿದರು. 'ಹೊರಗಿನವರಾದರೆ ಸೆಕ್ಯೂರಿಟಿ ಹಿಡಿದು ಹಾಕುತ್ತಾರೆ. ಒಳಗಿನವರೇ ಆದ ಅಡಿಗೆಯವರೋ ಇಲ್ಲಾ ಡ್ರೈವರ್‌ಗಳೋ ಇಂತಾ ಕೆಲಸಗಳನ್ನು ಮಾಡಿದರೆ ಯಾರನ್ನು ನಂಬುವುದು. ಟಿ.ವಿಯಲ್ಲಿ ಠೀವಿಯಿಂದ ಕಾಣಿಸಿಕೊಳ್ಳುವುದು ನನಗಿಷ್ಟವೇ ಹೊರತು, ಮುಖಕ್ಕೆ ಮುಸುಕು ಹಾಕಿಕೊಂಡಲ್ಲ' ಎಂದು ಮುಸುಮುಸು ಅತ್ತಿದ್ದಳು. ಅವಳ ಬಿಸಿಯಾದ ಕಣ್ಣೀರು ಅವರ ತುಂಬಿದೆದೆಯ ಮೇಲೆ ಬಿದ್ದು ದೇವ್ರ ಹೃದಯವನ್ನು ಕರಗಿಸಲು ಪ್ರಯತ್ನಿಸಿತ್ತು. ಕರಗಿದ ಹೃದಯ ಅವಳ ಕೊರಳಿಗೆ ನೆಕ್ಲೇಸ್ ರೂಪವಾಗಿ ಅಲಂಕರಿಸಿತು. ಯಾರೋ ಭಕ್ತರ ಹೆಂಡತಿ, ತನ್ನ ಪಾಪಗಳಿಂದ ಪಾರು ಮಾಡಿ ಪುನೀತಗೊಳಿಸಲು ಪ್ರಾಯಶ್ಚಿತ್ತವಾಗಿ ತನ್ನೆಲ್ಲಾ ಒಡವೆಗಳನ್ನು ದೇವ್ರ ಪಾದದಲ್ಲಿಟ್ಟಳು. ದೇವ್ರ ಪಾದಧೂಳಿಯ ಪುಣ್ಯ ಅವಳನ್ನು ಮೂರನೆಯ ದಿನವೇ ಭಗವಂತನ ಪಾದ ಸೇರಿಸಿತ್ತು. ಶೇಕಡಾ ಎಂಭತ್ತು ಭಾಗ ಒಡವೆ ಮಠದ ಲೆಕ್ಕ ಸೇರಿತ್ತು. ಕೇವಲ ಒಂದೋ ಎರಡೋ ಒಡವೆಗಳು ಬುದ್ಧಿಯವರ ಅಂತರ್‌ಗೃಹದ ಅಲ್ಮೇರಾದಲ್ಲಿ ಆರಾಮಾಗಿ ಕುಳಿತಿತ್ತು. ಒಂದಕ್ಕೆ ಇವತ್ತು ಮುಕ್ತಿ.

ಹೊರಗಡೆ ಕಾಯುತ್ತಾ ಕುಳಿತ ಶಿಷ್ಯವೃಂದಕ್ಕೆ ಭಯವಾಯ್ತು. ಇಷ್ಟೊತ್ತಾದರೂ ದೇವ್ರು ಹೊರಬರದಿದ್ದುದರಿಂದ ಆತ್ಮ ಏನಾದರೂ ದೇಹದಿಂದ ಅಲ್ಲಿಯೇ ಮುಕ್ತಿ ಪಡೆದು ಬಿಟ್ಟಿತೇನೋ ಎಂಬ ಸಂದೇಹ ಕಾಡದೆ ಇರಲಿಲ್ಲ. ಸ್ವಲ್ಪ ಹೊತ್ತಿನ ಮುಂಚೆ ಅವರೊಟ್ಟಿಗೆ ಮಾತಾಡಿದ ಭಟ್ಟ ಅವರ ಕಡೆಯ ಆಶೀರ್ವಚನಕ್ಕೆ ಭಾಗಿಯಾದ ಪುಣ್ಯಾತ್ಮನಾಗಿ ಬಿಟ್ಟ ಎಲ್ಲರ

ಕಣ್ಣಲ್ಲೂ, ಎಲ್ಲರ ಕಣ್ಣೂ ಇನ್ನೇನು ತೇವವಾಗಬೇಕು, ಅಷ್ಟರಲ್ಲಿ ತೇವವಾದ ಮೈಯನ್ನೊರೆಸುತ್ತಾ ಹೊರಬಂದ ದೇವ್ರನ್ನು ಕಂಡು ಎಲ್ಲರ ಕಣ್ಣೀರು ಆನಂದಭಾಷ್ಪವಾಗಿ ಮಾರ್ಪಟ್ಟಿತು.

ದೇವ್ರು ಮಡಿ ಬಟ್ಟೆ ತೊಡಲು ಒಳ ಹೋಗುತ್ತಿದ್ದಂತೆ, 'ಮಹಾತ್ಮರೆಂದರೆ ಇವರೇ ನೋಡಿ ಎಲ್ಲೆಂದರಲ್ಲಿ ಧ್ಯಾನಾಸಕ್ತರಾಗಿ ಬಿಡುತ್ತಾರೆ' ಎಂದು ಒಬ್ಬರೆಂದರೆ 'ರಾತ್ರಿ ಧ್ಯಾನಕ್ಕೆ ಕೂತ್ರೆ ಹಾಗೇ ಸಮಾಧಿ ಸ್ಥಿತಿಗೋಗಿ ಮಧ್ಯಾಹ್ನ ಎರಡಕ್ಕೋ ಮೂರಕ್ಕೋ ಕಣ್ಬಿಡ್ತಾರಂತೆ' ಎಂದು ಅವರ ಮಹಿಮೆಯನ್ನು ಕೊಂಡಾಡುತ್ತಾ ಭಕ್ತವೃಂದ ಪ್ರಸಾದಕ್ಕಾಗಿ ಭೋಜನಶಾಲೆಯ ಕಡೆ ಹೊರಟಿತು.

ಎಲ್ಲರೂ ಪ್ರಸಾದ ಸ್ವೀಕರಿಸಿ ಆಶೀರ್ವಚನಕ್ಕಾಗಿ ಸಭಾಂಗಣದಲ್ಲಿ ಸೇರುತ್ತಿದ್ದಂತೆ ದೇವ್ರ ಆರೋಗಣೆ ನಡೆದಿತ್ತು. ದೇವ್ರು ಸಭಾಂಗಣಕ್ಕೆ ಕಾಲಿರಿಸುತ್ತಲೇ ಕುಳಿತಿದ್ದ ಭಕ್ತವೃಂದದ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಎದ್ದು ನಿಂತು ಕೈಮುಗಿವವರು ಮುಗಿದರು, ತಲೆ ಬಾಗಿಸಿದವರು ಕೆಲವರು. ನಿಂತಲ್ಲಿಯೇ ಜಾಗ ಮಾಡಿಕೊಂಡು ದೀರ್ಘದಂಡ ಹಾಕಿದವರೂ ಉಂಟು.

ದೇವ್ರು ಆಸೀನರಾಗುತ್ತಿದ್ದಂತೆ ನಿಂತ ಕಡೆಯೇ ಕುಳಿತರು ಎಲ್ಲರೂ. ಪಕ್ಕಾ ಪರಿಚಾರಕ ಪಕ್ಕದಲ್ಲಿ ನಿಂತು ಕೈಗಳನ್ನು ಬಾಯಿಗಡ್ಡವಾಗಿ ಹಿಡಿದು ಜೋರಾಗಿ ಉಸಿರೂ ಬಿಡದೆ ಏನೋ ಉಸಿರಿದ. ದೇವ್ರು ಮಂದಸ್ಮಿತರಾಗುತ್ತಿದ್ದಂತೆ ದೂರದಲ್ಲಿ ಕುಳಿತಿದ್ದ ರೇಷ್ಮೆ ಧೋತಿ ಜುಬ್ಬಾದ ವ್ಯಕ್ತಿಯನ್ನು ಕೈಸನ್ನೆಯಲ್ಲೇ ಕರೆದ. ಆತ ಸಂಸಾರ ಸಮೇತರಾಗಿ ಮುಂದೆ ಬಂದು ತಂದಿದ್ದ ಸಕಲ ಕಾಣಿಕೆಯನ್ನು ಭಯಭಕ್ತಿಯ ಜೊತೆಯಲ್ಲಿ ಮುಂದಿಟ್ಟು ದೀರ್ಘದಂಡ ಹಾಕಿ ನಿಂತ. ಕೈ ಎತ್ತಿ ಆಶೀರ್ವದಿಸುತ್ತಾ ಏನು ಬೇಕೆಂದು ಮೆಲು ಧ್ವನಿಯಲ್ಲಿ ಕೇಳಿದರು. ಆ ಧ್ವನಿ ಅವರಿಗೇ ಕೇಳಿಸಿತೋ ಎಲ್ಲವೋ ಎನ್ನುವ ರೀತಿ.

'ಇರೋನು ಒಬ್ನೆ ಮಗ. ಮದುವೆ ಆಗಿ ಮೂರು ವರ್ಷ ಆಯ್ತು. ವಂಶ ಅವನಿಂದಲೇ ಬೆಳೀಬೇಕು. ಯಾಕೋ ಆ ದೇವರಿಗಿನ್ನೂ ನಮ್ಮ ಮೇಲೆ ಕರುಣೆ ಬಂದಿಲ್ಲ, ಅದಕ್ಕೆ ಈ ದೇವ್ರ ಅನುಗ್ರಹ ಆದ್ರೆ ವಂಶ ಉದ್ಧಾರ ಆಗುತ್ತೇ. ಅದಕ್ಕೆ ಆಶೀರ್ವಾದ ಪಡೀಬೇಕೂಂತ ಬಂದ್ವಿ'' ಅಂಜಲೀಬದ್ಧನಾಗಿ ಹೇಳಿದ ಭಕ್ತನ ಮಾತನ್ನು ಗಮನವಿಟ್ಟು ಕೇಳಿದ ದೇವ್ರ ಕಣ್ಣುಮಾತ್ರ ಅವರು ಇಟ್ಟಿರುವ ಕವರಿನಲ್ಲಿರಬಹುದಾದ ಹಣವನ್ನು ಲೆಕ್ಕಹಾಕುತ್ತಿತ್ತು. 'ಭಗವಂತನಿದ್ದಾನೆ ಚಿಂತಿಸಬೇಡಿ. ಎಲ್ಲಾ ಒಳ್ಳೆದಾಗುತ್ತೆ' ಹಸನ್ಮುಖದಿಂದ ಹೊರಹೊಮ್ಮಿದ ಆಶೀರ್ವಾದವನ್ನು ಕೇಳುತ್ತಿದ್ದಂತೆ ಸೊಸೆಯನ್ನು ತಕ್ಷಣವೇ ಮೆಟರ್ನಿಟಿಹೋಮಿಗೆ ಕರೆದೊಯ್ಯುವಷ್ಟು ಸಂತೋಷವಾಯ್ತು. 'ನೋಡಿ ಬೇಕು ಎಂದು ಆಸೆ ಪಡುವವರಿಗೆ ಕೊಡದೆ ಆಟವಾಡಿಸುತ್ತಾನೆ. ಸಾಕೆನ್ನುವವರಿಗೆ ಉಡಿತುಂಬಾ ಸುರಿಯುತ್ತಲೇ ಇರುತ್ತಾನೆ' ಹೌದು ಅದು ಅವರದೇ ಅನುಭವ. ಎಷ್ಟು ಹುಷಾರಿಯಿಂದಿದ್ದರೂ ಅರಳುವ ಮುಂಚೆಯೇ ದೇವರಪಾದ ಸೇರಿಕೊಂಡ ಅವರ ಮೊಗ್ಗುಗಳದೆಷ್ಟೋ. ತಮ್ಮ ಆತ್ಮಾನುಭವವನ್ನು ಆಧ್ಯಾತ್ಮಿಕ ರೂಪದಲ್ಲಿ ಆಶೀರ್ವಚನವಾಗಿ ಹೇಳುವದು ಅವರ ದೊಡ್ಡ ಗುಣ.

ಅದರಿಂದಲೋ ಏನೋ ಅವರ ಆಶೀರ್ವಾದಕ್ಕೆ ಬಹಳ ಬೆಲೆ. ಹೌದು ಕೆಲವು ಸಲವಂತೂ ಅದು ಕೋಟಿಯನ್ನೂ ಮೀರಿತೆಂದು ರಾಜಕೀಯದ ಹಿರಿಯ ಮುಖಂಡರ ಆಗಮನ ಕಂಡ ಶಿಷ್ಯಕೋಟಿಯ ಅಂದಾಜು. ದೇವ್ರ ಮಾತಿಗೆ ಮೌನದ ರುಜು ಹಾಕಿ ಮುಗುಳ್ನಗೆಯ ಮುದ್ರೆ ಒತ್ತಿದ ಭಕ್ತಾಗ್ರೇಸರನೆಂದ 'ನಮ್ಮ ಪರವಾಗಿ ಭಗವಂತನಿಗೆ ಹೇಳಿ. ವರ್ಷದೊಳಗೆ ಕೂಸು ಕಣ್ಬಿಡಲಿ ಮನೇಲಿ. ದೇವ್ರ ಪಾದಪೂಜೆ ಇಟ್ಕೊತೀನಿ' 'ಭಗವಂತನ ಮೊಬೈಲ್ ನಂಬರ್ ಇದ್ರೆ ಕೊಡಿ ಹೇಳಿಸ್ತೀನಿ' ಎಂದೆನಬೇಕೆನಿಸಿದ ಪಕ್ಕಾ ಪರಿಚಾಲಕನಿಗೆ ಕಿಸಕ್ಕನೆ ನಗುಬಂದು ಪಕ್ಕಕ್ಕೆ ತಿರುಗಿದ. ಇದು ಲಂಚವೋ ಕಂಡಿಷನ್ನೋ ದೇವ್ರಿಗೆ ಅರ್ಥವಾಗಲಿಲ್ಲ. ಇದು ತನ್ನ ಜೂರಿಡಿಕ್ಷನ್ ಅಲ್ಲ. ಹೇಗೆ ತಾನೇ ಅಷ್ಯೂರೆನ್ಸ್ ಕೊಡುವುದು. 'ಉಸಿರು ನಿಂತು ಹೊಗುತ್ತಿರುವ ಸ್ಥಿತಿಯಲ್ಲಿ ರೋಗಿ ಇದ್ದರೂ ನಮ್ಮ ಪ್ರಯತ್ನ ನಾವು ಮಾಡ್ತಾ ಇದೀವಿ. ಇದ್ರ ಮೇಲೆ ದೇವ್ರಿಚ್ಛೆ, ಅವನೇ ಕಾಪಾಡ್ಬೇಕು' ಎಂದು ಹೇಳುವ ಡಾಕ್ಟರುಗಳಂತೆ ' ಆಯ್ತು ಭಗವಂತನಿದ್ದಾನೆ. ನಂಬಿ ಒಳ್ಳೆದಾಗುತ್ತೆ' ಎಂದು ಆಶೀರ್ವಾದದ ಕೈ ತೋರಿದೊಡನೆ ಪಕ್ಕಾ ಪರಿಚಾರಕ ಚುರುಕಾದ. ಇನ್ನು ಮುಂದೆ ನಡೆಯಬಹುದೆಂದು ಅವರಿಗೆ ಕಣ್ಸನ್ನೆಯಲ್ಲೇ ತಿಳಿಸಿದ.

ಅವರು ಎರಡು ಹೆಜ್ಜೆ ಹಿಂದೆ ಇಡುವಷ್ಟರಲ್ಲಿಯೇ ಹಿಂದೇ ಎಲ್ಲೋ ಮೂಲೆಯಲ್ಲಿದ್ದ ಮರಿಪುಢಾರಿ ಮಾದೇಸ ಧುತ್ತೆಂದು ದೇವ್ರ ಮುಂದೆ ಪ್ರತ್ಯಕ್ಷನಾದ. ಅವನ ವರ್ತನೆ ಪಕ್ಕಾ ಪರಿಚಾಲಕನಿಗೆ ಸರಿ ಕಾಣಲಿಲ್ಲ. ಆದರೆ ಯಾರೂ ಮಠದ ವಿರುದ್ಧ ಸೊಲ್ಲೆತ್ತದಂತೆ ಕಾಯುತ್ತಿದ್ದ ಮಾದೇಸನಿಗೆ ಏನು ಹೇಳುವುದಕ್ಕೂ ಆಗದು. ಅವನ ಚಡಪಡಿಕೆಯನ್ನು ಅರ್ಥ ಮಾಡಿಕೊಂಡ ಮಾದೇಸ 'ಏನ್ಮಾಡ್ತಾ ಇದೀರ ಬನ್ರಲೇ' ಎಂದು ಹಿಂಬಾಲಕರಿಗೆ ಒಂದು ಆವಾಜ್ ಬಿಟ್ಟ, ಎಂಟ್ಹತ್ತು ಜನ ದಿಬಿ ದಿಬಿ ಓಡಿ ಬಂದು ಕಾಣಿಕೆಗಳನ್ನು ದೇವ್ರ ಮುಂದಿಟ್ಟು ಕೈ ಸಹ ಮುಗಿಯದೆ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಕೈ ಮುರಿಯುವ ಜನರಿಗೇನು ಗೊತ್ತು ಕೈ ಮುಗಿಯುವುದು ಎನ್ನಿಸಿತು ಪರಿಚಾರಕನಿಗೆ.

'ಚೆನ್ನಾಗಿದೀಯಾಪ್ಪಾ? ಏನಾಗ್ಬೇಕಿತ್ತು? ದೇವ್ರು ಕೇಳಿದರು. 'ಎಲೆಕ್ಷನ್ ಬತ್ತಾಯ್ತೆ. ತಾವೊಂದು ಮಾತು ಸಿ.ಎಂ.ಗೇಳಿದ್ರೆ ನಂಗೊಂದು ಟಿಕೇಟು ಸಿಕ್ತದೆ' ಅಂಗೈ ಹೊಸೆಯುತ್ತಾ ಅಂಗಲಾಚಿದ. 'ನಿನ್ನಾಸೆ ಏನೋ ಸರಿ, ಆದ್ರೆ ನಮಗೂ ರಾಜಕೀಯಕ್ಕೂ ಭಾಳಾ ದೂರ' ಗಡ್ಡ ತುರಿಸಿಕೊಳ್ಳುತ್ತಾ ದೇವ್ರು ನುಡಿದರು.

ಪಾಪ ದೇವ್ರು ದಿಂಡ್ರೂಂತಿರೋ ನಿಮ್ಗೆ ರಾಜಕಿಯ ದೂರ. ಅದು ನಂಗೂ ಗೊತ್ತದೆ. ಆದ್ರೆ ಸಿ.ಎಂ. ಸಾಯೇಬ್ರು ನಿಂಗೆ ಬಾಳ ಅತ್ರ ಅಲ್ಲವ್ರಾ, ಅದ್ಕೆ ದೇವ್ರು ಒಂದು ಮಾತೇಳಿದ್ರೆ ಕೆಲ್ಸ ಆಯ್ತದೆ' ಸಿ.ಎಂ. ಯಾರ್ಗಾದ್ರೂ ಮಾತ್ಕೊಟ್ಟಿದ್ರೆ ನಾನೇನು ಮಾಡ್ಲಿ ಹೇಳು' ಮುಂದಿಟ್ಟ ಕಾಣಿಕೆಗಳನ್ನು ಕೂಲಂಕುಶವಾಗಿ ನೋಡುತ್ತಾ ಹೇಳಿದರು. ಅವರ ಮನದಿಂಗಿತ ಅರ್ಥವಾಗದಷ್ಟು ದಡ್ಡನೇನು ಅಲ್ಲ ಮಾದೇಸ, 'ಖರ್ಚಿಗೆ ಪಾರ್ಟಿಯಿಂದೇನು ನಂಗೆ ಬೇಡ. ನಾನೇ ವಸಿ ಪಾರ್ಟೀನ ನೋಡ್ಕೋತೀನಿ. ನಿಮ್ ಕಡೆಯಿಂದಾನೇ' ಭಕ್ತ ಅರ್ಥ ಗ್ರಹಿಸಿದನೆಂದು

ತಿಳಿದ ದೇವ್ರು 'ಭಗವಂತ ಇದ್ದಾನೆ ಎಲ್ಲಾ ಒಳ್ಳೇದು ಮಾಡ್ತಾನೆ' ಎಂದು ಅನುಗ್ರಹಿಸಿದರು. 'ನಮ್ಗೆ ನೀವೇ ಭಗ್ವಂತ' ಎನ್ನುತ್ತಾ ಬಾಗಲಾರದ ತಲೆಯನ್ನು ಬಾಗಿಸಿ ಹೊರಟ. ಯಾಕೋ ಸಾಕೆನಿಸಿತು ದೇವ್ರಿಗೆ. ಗೋಡೆ ಗಡಿಯಾರದ ಕಡೆ ನೋಡಿದರು. ಆಗಲೇ ಆರಾಗುತ್ತಿದೆ. ತಲೆ ಧಿಂ ಎನ್ನುತ್ತಿತ್ತು. 'ಯಾರಾದರೂ ಮುಖ್ಯವಾದವರು... ?' ಪರಿಚಾರಕರನ್ನು ಕೇಳಿದರು.

'ಯಾರಿಲ್ಲ' ಆತ ಹೇಳಿದೊಡನೆ 'ಸರಿ ನಾವು ವಿಶೇಷ ಪೂಜೆ ಮಾಡುವುದಿದೆ. ಬೇಗ ಪ್ರಸಾದ ತೆಗೆದುಕೊಳ್ಳಲು ಹೇಳಿಬಿಡಿ' ಎಂದರು. ದೇವ್ರ ಮಾತನ್ನು ಪರಿಚಾರಕ ತುತ್ತೂರಿಯಂತೆ ಬಿತ್ತರಿಸಿದ. ಉಳಿದ ಭಕ್ತಾದಿಗಳೆಲ್ಲ ತಂದ ಕಾಣಿಕೆಗಳನ್ನು ದೇವ್ರ ಮುಂದಿದ್ದ ತಟ್ಟೆಯಲ್ಲಿಟ್ಟು ಕೈ ಮುಗಿಯುತ್ತಲೋ ತಲೆ ಬಾಗಿಸುತ್ತಲೋ ಹತ್ತೇ ನಿಮಿಷದಲ್ಲಿ ಜಾಗ ಖಾಲಿ ಮಾಡಿದರು.

ಏ.ಸಿ. ರೂಮಿನಲ್ಲಿ, ಮೃದುವಾದ ಹಾಸಿಗೆಯಲ್ಲಿ ಮಲಗಿದರೂ ಜ್ವರ ಬಂದಂತೆ ಬಿಸಿಯಾದ ಮೈಯನ್ನು ಆಚೀಚೆ ಹೊರಳಿಸುತ್ತಾ, ಸಿಕ್ಕಿಬಿದ್ದ ದಡ್ಡ ಸ್ವಾಮಿಯನ್ನು ಶಪಿಸುತ್ತಾ ಮುಂದಿನ ದಾರಿಯ ಬಗ್ಗೆ ಚಿಂತಿಸುತ್ತಾ ಬಕ್ಕಬೋರಲಾದರು ದೇವ್ರು.

✵

---

## ಯಾರಿಗೆ ಥ್ಯಾಂಕ್ಸ್?

ಗುಂಡು ಪಾರ್ಟಿಯೊಂದರಲ್ಲಿ ಒಬ್ಬ ಜೋರಾಗಿ ಕೂಗಿ ಹೇಳಿದ: ವಿವಾಹಿತ ಗೆಳೆಯರೇ, 'ನಿಮಗೆ ಅತ್ಯಂತ ಖುಷಿ ಕೊಟ್ಟ ವ್ಯಕ್ತಿಯನ್ನ ತಬ್ಬಿಕೊಂಡು ಥ್ಯಾಂಕ್ಸ್ ಹೇಳಿ' ಎಂದಾಗ ಎಲ್ಲರೂ ಹೋಗಿ ಗುಂಡು ಸಪ್ಲೈ ಮಾಡುತ್ತಿದ್ದವನನ್ನು ತಬ್ಬಿಕೊಳ್ಳುವುದೆ?

---

**ಗಂಡ:** ನಾನು ಹೋದ ಮೇಲೆ ನಿನಗೆ ನನ್ನಂತಹವನು ಇನ್ನೊಬ್ಬ ಖಂಡಿತ ಸಿಗುವುದಿಲ್ಲ, ತಿಳಿದುಕೊ.

**ಹೆಂಡತಿ:** ನಿನ್ನಂತಹವನೇ ನನಗೆ ಬೇಕು ಎಂದು ನಾನೆಂದುಕೊಂಡಿದ್ದೇನೆ ಎಂದು ನೀನೇಕೆ ಭಾವಿಸಬೇಕು?

ಹುರುಳಿ ಕಟ್ಟು...

# ಹೃದಯವಂತಿಕೆ.....

**- ಎಚ್. ಗೋಪಾಲಕೃಷ್ಣ**

**ನ**ನಗೆ ಗೊತ್ತಿರುವ ಒಂದು ಕ್ರೆಡಿಟ್ ಸೊಸೈಟೀಗೆ ಮೊನ್ನೆ ಹೋಗಿದ್ದೆ. ಅಲ್ಲಿ ನನ್ನ ಸರದಿ ಬರುವವರೆಗೆ ಕಾಯುತ್ತಾ ಕೂಡಬೇಕಾಯಿತು. ಕಾಯುತ್ತಾ ಕೂಡಬೇಕಾದರೆ ಮಾಡುವ ಕೆಲಸವನ್ನೇ ನಾನೂ ಮಾಡಿದೆ. ಪಕ್ಕದಲ್ಲಿ ಕೂತವರ ಸಂಗಡ ಮಾತುಕತೆ ಶುರು ಹಚ್ಚಿದೆ. ಅವರೂ ಯಾರಿಗೋ ಕಾಯುತ್ತಾ ಕೂತಿದ್ದರು. ಇಪ್ಪತ್ತು ಸಾವಿರ ಸಾಲಕ್ಕೆ ಬಂದಿದ್ದರಂತೆ. ಇವರಿಗೆ ಶೂರಿಟಿ ಹಾಕಬೇಕಿರುವವರು ಇನ್ನೂ ಬಂದಿರಲಿಲ್ಲ. ಅವರ ಜತೆಗೆ ಒಂದು ಪೀಯೂಸಿ ಓದುವ ವಯಸ್ಸಿನ ಹುಡುಗ. ಹುಡುಗ ಊರಿನಿಂದ ಬಂದಿದ್ದಾನಂತೆ. ಇಲ್ಲಿ ಕಾಲೇಜಿಗೆ ಸೇರಬೇಕು. ಬಡತನದ ಹಿನ್ನೆಲೆಯ ಹುಡುಗ, ತಂದೆ ತಾಯಿ ಇಲ್ಲ, ಎಸ್ಸೆಲ್ಸಿ ಪರೀಕ್ಷೆಯನ್ನು ಎಂಬತ್ತಾರು ಪರ್ಸೆಂಟು ತಗೊಂಡು ಪಾಸು ಮಾಡಿದ್ದಾನೆ. ಅವನನ್ನು ಕಾಲೇಜಿಗೆ ಸೇರಿಸಲು ಇವರಿಗೆ ತುರ್ತಾಗಿ ಹಣಬೇಕಾಗಿದೆ. ಇವರೂ ಯಾವುದೋ ಸಣ್ಣ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ, ಅದರಿಂದ ಅವರ ಬಳಿ ಹುಡುಗನಿಗೆ ಹಣ ಹೊಂದಿಸಲು ಆಗುತ್ತಿಲ್ಲ, ಗೆಳೆಯರ ನೆರವು ಕೇಳಿದರಂತೆ. ಅವರು ಇಲ್ಲೀಗೆ ಬನ್ನಿ ನೋಡೋಣಾ ಅಂತ ಹೇಳಿದ್ದಾರಂತೆ.

ನಿಮ್ಮ ಪರಿಚಯವೇ ಹುಡುಗ ಅಂದೆ.

ಇಲ್ಲಾ ಸಾರ್. ನಮ್ಮ ಹಳ್ಳಿಯವನು- ಇವನ ತಂದೆ ತಾಯಿ ನನಗೆ ಪರಿಚಯವಿರುವವರಿಗೆ ಗೊತ್ತು, ಅವರು ಒಂದು ಪತ್ರ ಬರೆದು ಕಳಿಸಿದಾರೆ. ಹುಡುಗ ಆ ಪತ್ರ ತಗೊಂಡು ನಿನ್ನೆ ರಾತ್ರಿ ನಮ್ಮ ಮನೇಗೆ ಬಂದ. ಓದಬೇಕು ಅನ್ನುವ ಹುಡುಗರಿಗೆ ಏನಾದರೂ ಸಹಾಯ ಮಾಡುಕ್ಕೆ ಆಗುತ್ಯೇ ಅಂತ ನನಗೆ ಗೊತ್ತಿರೋರನ್ನ ವಿಚಾರಿಸಿದೆ. ಅವರೂ ದೊಡ್ಡ ಕುಳವೇ ಇಲ್ಲೀಗೆ ಬನ್ನೀ ಸಾಲ ಕೊಡಿಸ್ತೀನಿ ಆದರೆ ಅಂದರು ಅದಕ್ಕೇ ಕರೆದುಕೊಂಡು ಬಂದಿದೀನಿ...

ದೊಡ್ಡ ಕುಳ ಅಂತೀರೀ ಅವರೇ ಸಹಾಯ ಮಾಡಬಹುದಾಗಿತ್ತು ಅಲ್ಲವೇ ಅಂತ ಕೇಳಿದೆ.

ನಾನೂ ಹಾಗೇ ಅಂದುಕೊಂಡಿದ್ದೆ ಸಾರ್...

ಅಷ್ಟರಲ್ಲಿ ಆವರ ಪರಿಚಯದವರು ಬಂದರು. ನನಗೂ ಗೊತ್ತಿರುವವರೇ. ನಮಸ್ಕಾರ ಅಂದರು. ಒಂದು ನಿಮಿಷ ಇವರ ಕೆಲಸ ಮುಗಿಸಿಕೊಟ್ಟು ಬರ್ತೀನಿ... ಅಂತ ಒಳಹೊಕ್ಕರು. ಹತ್ತು ಹದಿನೈದು ನಿಮಿಷ ಕಳೀತು. ಮೂರೂ ಜನ ಆಚೆ ಬಂದರು.

ಸಾರ್, ಕೆಲಸ ಆಯಿತು, ಈ ಸಾರು ಕೆಲಸ ಮುಗಿಸಿಕೊಟ್ಟರು. ಹುಡುಗನಿಗೆ ಒಂದು ದಾರಿ ಆಯಿತು ಅಂತ ಕೈ ಮುಗಿದು ಅವರು ಬೀಳ್ಕೊಟ್ಟರು.

ಪರಿಚಯದ ಮನುಷ್ಯ ಬಂದು ಎದುರು ಕೂತ. ಹೀಗೆ ಫೋನು ಮಾಡಿ ಹುಡುಗನ ಪರಿಸ್ಥಿತಿ ವಿವರಿಸಿದರು. ನಾನೇ ಸಹಾಯ ಮಾಡಲೇ ಅಂತ ಅನಿಸಿತು. ಆಮೇಲೆ ಹುಡುಗ ಊರಿನಿಂದ ಬರ್ತಿದಾನೆ ಒಮ್ಮೆಲೇ ಇಲ್ಲೀ ಪರಿಸರದ ಪ್ರಭಾವಕ್ಕೆ ಒಳಗಾಗಿ ಅವನು ಅವನನ್ನ ಮರೀಬಾರದು ಅನಿಸಿತು. ಅದಕ್ಕೇ ಹುಡುಗನ್ನೂ ಕರೆದುಕೊಂಡು ಇಲ್ಲೀಗೆ ಬನ್ನಿ, ಸಾಲ ಕೊಡಿಸ್ತೀನಿ ಅಂತ ಯಜಮಾನರಿಗೆ ಹೇಳಿದೆ. ಈಗ ನೋಡಿ ಹುಡುಗನಿಗೆ ಯಾರೋ ಪರಿಚಯವೇ ಇಲ್ಲದೇ ಇದ್ದೋರು ಸಾಲ ಕೊಡಿಸಿದಾರೆ ಅನಿಸುತ್ತೆ ಮತ್ತು ಹುಡುಗನಿಗೆ ವಿದ್ಯೆ ಮೇಲೇನೆ ಗಮನ ಇರುತ್ತೆ... ಅಲ್ವಾ? ನಾನು ಮಾಡಿದ್ದು ಸರೀನಾ?

ಅಲ್ಲವೋ ಮಾರಾಯಾ ನೀನು ಮಾಡಿದ್ದೇನೋ ಸರಿ, ಆದರೆ ಇವರ ಮೇಲೆ ಹೊರೆ ಬೀಳುತ್ತಲ್ಲೋ...

ಅಂತ ಸಮಯ ಬಂದರೆ ನಾವು ಇರೋದಿಲ್ಲವಾ? ಏನು ಹೇಳ್ತೀರೀ?

ಕಾಸುಕಾಸಿಗೆ ಬಡ್ಡಿ ಬಿಡುವವರ ಮನೋಭಾವ ಗೊತ್ತಿತ್ತು, ಆದರೆ ಇವನದ್ದು ಒಂದು ವಿಚಿತ್ರ ಅನಿಸಿತು. ಆದರೇನೋಪ್ಪಾ ನೀನೇ ಬಡ್ಡೀಗೆ ಬಿಟ್ಟಿದ್ದರೆ ಆಗ್ತಿತ್ತಲ್ಲಾ ಅಂದೆ.

ಸಾರ್ ನನಗೂ ಹೃದಯ ಇದೆ.... ಅಂದ!

ಭೇಷ್ ನಿನಗಿರುವ ಹೃದಯ ನಮ್ಮೆಲ್ಲರಿಗೂ ಬರಲಿ ಅಂದೆ, ಸರೀತಾನೇ?

✵

---

## ವ್ಹಾ ಡ್ಯಾಡಿ!

ಬರ್ಲಿನ್‌ನಲ್ಲಿ ಓದುತ್ತಿದ್ದ ದುಬಾಯಿನ ಆ ಅರಬ್ ಹುಡುಗ ತನ್ನ ತಂದೆಗೆ ಒಂದು ದಿನ ಮೇಲ್ ಕಳಿಸಿದ:

***ಡಿಯರ್ ಡ್ಯಾಡ್,***
ಬರ್ಲಿನ್ ನಗರ ಅದ್ಭುತವಾಗಿದೆ. ಜನ ತುಂಬಾ ಒಳ್ಳೆಯವರು. ಆದರೆ ನನಗೆ ಪ್ರತಿ ದಿನ ಈ ಬೆಂಜ್ ಕಾರಿನಲ್ಲಿ ಹೋಗಲು ನಾಚಿಕೆ ಆಗುತ್ತದೆ. ಏಕೆಂದರೆ ನನ್ನ ಎಲ್ಲ ಲೆಕ್ಚರರ್‌ಗಳು ಟ್ರೇನ್‌ನಲ್ಲಿ ಕಾಲೇಜಿಗೆ ಬರುತ್ತಾರೆ.
ನಿಮ್ಮ ಮಗ
- ***ನಿಸಾರ್***

ಅಪ್ಪನಿಂದ ಉತ್ತರ ಬಂದಿತು ಕೆಲವು ದಿನಗಳ ನಂತರ,

***ಪ್ರೀತಿಯ ಮಗನೇ,***
ನೀನು ಕಾರಿನಲ್ಲಿ ಕಾಲೇಜಿಗೆ ಹೋಗಲು ನಾಚಿಕೆ ಪಟ್ಟಿಕೊಳ್ಳುತ್ತಿದ್ದೀಯಾ ಎಂದು ತಿಳಿದು ನಮಗೆ ಆತಂಕವಾಯಿತು. ನಿನ್ನ ಬ್ಯಾಂಕ್ ಖಾತೆಗೆ ೨೦ ದಶ ಲಕ್ಷ ಡಾಲರ್ ಜಮೆ ಮಾಡಿದ್ದೀನಿ. ನೀನೂ ಒಂದು ಟ್ರೇನ್ ಖರೀದಿಸಿ ಕಾಲೇಜಿಗೆ ಹೋಗಲು ಉಪಯೋಗಿಸು.
ಇತಿ
- ***ನಿಮ್ಮಪ್ಪ***

# ‘ಮುನ್ಸೂಚನೆ’ಯ ಬಿರುಗಾಳಿ

**- ಇಸ್ಮಾಯಿಲ್**

**ಬ್ಯಾಂ**ಕಿನಲ್ಲಿ ಯಾವಾಗಬೇಕಾದರೂ ಎಷ್ಟು ಬೇಕಾದರೂ ಹಣ ತೆಗೆದು ಕೊಳ್ಳಬಹುದೆಂದು ಜನರು ತಿಳಿದಿರುವುದರಲ್ಲಿ ಅಥವಾ ನಂಬುವುದರಲ್ಲಿ ತಪ್ಪೇನಿಲ್ಲ. ಈಗಿನ ಕಾಲದ ಎ.ಟಿ.ಎಂ.ನಲ್ಲಿ ಒಂದು ಸಾರಿ ಇಂತಿಷ್ಟೆ ಗರಿಷ್ಟ ನಗದು ಹಣವನ್ನು ಪಡೆಯಬೇಕೆಂಬ ನಿರ್ಬಂಧವಿರುತ್ತದೆ. ಕಾರಣ ಅದೇನು ಅಕ್ಷಯ ಪಾತ್ರೆಯಲ್ಲ, ಇರುವ ಹಣವೆಲ್ಲ ಖಾಲಿಯಾಗಬಹುದು ಆಗ ಅದನ್ನು ಮತ್ತೆ ತುಂಬಬೇಕು. ಅಲ್ಲಿಯವರೆಗೆ ಕಾಯುವುದು ಅನಿವಾರ್ಯ. ಈ ವಾಸ್ತವವನ್ನು ಗ್ರಾಹಕರು ಒಪ್ಪಿಕೊಂಡಿದ್ದಾರೆ. ಆದರೆ ಹಿಂದೊಮ್ಮೆ ಬ್ಯಾಂಕಿನಲ್ಲಿ ‘ನಗದು ಇಲ್ಲ’ ಎಂದರೆ ಬ್ಯಾಂಕ್ ದಿವಾಳಿ ಅಂಚಿನಲ್ಲಿದೆಯೊ ಎಂದು ಅನುಮಾನಿಸುವ ಮುಗ್ಧರು ಇದ್ದರು. ಹಳ್ಳಿಯೊಂದರ ಶಾಖೆಯಲ್ಲಿ ಒಮ್ಮೆ ಒಬ್ಬ ರೈತ ಕಟ್ಟಿಗೆ ಹಣವನ್ನು ತೆಗೆದುಕೊಂಡು ಹಿಂದೆ ನಿಂತಿದ್ದ ಇನ್ನೊಬ್ಬ ಗ್ರಾಹಕನು ಖಾತೆಯಿಂದ ಹಣ ತೆಗೆದಾಗ ಆ ನಗವನ್ನು ಕೊಟ್ಟಾಗ ಹಣ ಕಟ್ಟಿದ ರೈತ ‘‘ಏನ್ ಬುದ್ಧಿ, ನನ್ನ ದುಡ್ಡನ್ನು ಆ ವಯ್ಯನಿಗೆ ಕೊಟ್ಟು ಬಿಟ್ರಿ’’ ಎಂದು ಕೇಳಿದ ಪ್ರಸಂಗಗಳು ಇದೆ. ಹೌದು ಬ್ಯಾಂಕ್ ವ್ಯವಹಾರವೇ ಹಾಗೆ ಒಬ್ಬರ ದುಡ್ಡು ಇನ್ನೊಬ್ಬರಿಗೆ ಸಲ್ಲುತ್ತದೆ. ಆದರೆ ಗಾಬರಿಯಾಗಬೇಕಿಲ್ಲ. ಅವರವರ ಲೆಕ್ಕ ಅವರಿಗೆ. ನಗದು ಹಣ ಇಲ್ಲದಿದ್ದಾಗ ಬೇರೆ ಶಾಖೆಯಿಂದ ಅಥವಾ ಬೇರೆ ಬ್ಯಾಂಕಿನಿಂದ ತರಿಸುವ ಪದ್ಧತಿ ಇತ್ತು ಈಗಲೂ ಇದೆ.

ಹಣದ ಅಂದರೆ ರೂಪಾಯಿ ಮೂಲ್ಯ ಎಷ್ಟಿತ್ತೆಂದರೆ 25 ಸಾವಿರ ರೂಪಾಯಿ ಬಹಳ ದೊಡ್ಡ ಮೊಬಲಾಗಿತ್ತು. ನಲ್ವತ್ತು ವರ್ಷದ ಹಿಂದೆ. ಅಷ್ಟು ದೊಡ್ಡ ಮೊತ್ತವನ್ನು ಯಾರಾದರೂ ಖಾತೆಯಿಂದ ತೆಗೆಯಬೇಕಾಗಿದ್ದರೆ ಗ್ರಾಹಕ ಹಿಂದಿನ ದಿನವೇ ಬ್ಯಾಂಕ್‌ಗೆ ಬಂದು ಮುನ್ಸೂಚನೆ ಕೊಡಬೇಕಾಗಿತ್ತು. ಆಗ ನಗದನ್ನು ಮುಂಚೆಯೇ ವ್ಯವಸ್ಥೆ ಮಾಡುತ್ತಿದ್ದರು. ಈ ರೀತಿಯ ಮುನ್ಸೂಚನೆ ನೀಡುವ ಪದ್ಧತಿಯಿಂದ ಒಮ್ಮೆ ಒಬ್ಬ ಗ್ರಾಹಕ ಎಂತಹ ಫಜೀತಿಗೆ ಸಿಕ್ಕಿಹಾಕಿಕೊಂಡ ಗೊತ್ತೆ? ನಿಮಗೆ ಹೇಗೆ ಗೊತ್ತಾಗಬೇಕು, ನಾನು ಹೇಳಿದರೇನೆ ತಾನೆ ಗೊತ್ತಾಗೋದು....

ವರಿಷ್ಠಾಧಿಕಾರಿಗಳು ಯಾರಾದರೂ ಊರಿಗೆ ಬಂದರೆ ಎಲ್ಲಾ ಮ್ಯಾನೇಜರ್‌ನ್ನು ಕರೆದು ಯಾವುದಾದರೂ ಸಭೆಯನ್ನು ದಿಢೀರ್ ಅಂತ ಕರೆದು ಶಾಖೆಗೆ ಸಂಬಂಧಪಟ್ಟ ಅನೇಕ ಮಾಹಿತಿಗಳನ್ನು ಕೇಳುತ್ತಿದ್ದರು. ಅಂತಹ ಅಂಕಿ ಅಂಶಗಳನ್ನು ಕ್ರೋಢೀಕರಿಸುತ್ತಿದ್ದಾಗ ಬ್ಯಾಂಕಿನ ಹಾಲಿನಲ್ಲಿ ಯಾರೊ ಹೆಂಗಸರು ಜೋರಾಗಿ ‘‘....ನಾವು ಹಾಳಾಗಿ ಹೋದೆವು, ಮುಳುಗಿ ಹೋದೆವು ನಮ್ಮನ್ನು ಕಾಪಾಡುವವರು ಯಾರೂ ಇಲ್ವೆ..?’’ ಎಂದು ಅಳುತ್ತಿದ್ದುದು ಕೇಳಿಸಿತು. ಏನಪ್ಪಾ ಇದು ಗಲಾಟೆ ಎಂದು ಸೆಕ್ಯೂರಿಟಿ ಶಂಕರಪ್ಪನನ್ನು ಕರೆದು ಆಕೆಯನ್ನು ಕ್ಯಾಬಿನ್‌ಗೆ ಕಳುಹಿಸುವಂತೆ ಆದೇಶ ನೀಡಿದೆ. ತಾರಕದಲ್ಲೇ ಇನ್ನೂ ಕೂಗುತ್ತಿದ್ದ ಹೆಂಗಸು ತನ್ನ

ಯಜಮಾನನ ಜೊತೆ ಬಂದು ನನ್ನ ಎದುರಿನ ಸೀಟಿನಲ್ಲಿ ಕೂರುತ್ತ ''....ನಮ್ಮ 50 ಸಾವಿರ ರೂಪಾಯಿ ಸಾರ್, ಬೇರೆ ಯಾರಿಗೊ ಕೊಟ್ಟುಬಿಟ್ಟಿದ್ದಾರೆ. ನಾವು ಮಧ್ಯಮವರ್ಗದ ಜನ ಸಾರ್, ಸಂಬಳದಲ್ಲಿ ಬದುಕುವ ಜನ ಸಾರ್.... ಎಲ್ಲಾ ಇವರಿಂದಲೇ ಸಾರ್ ಸ್ವಲ್ಪನೂ ಬುದ್ಧಿಯಿಲ್ಲ..'' ಅಂತ ಪಕ್ಕದಲ್ಲಿದ್ದ ಯಜಮಾನರನ್ನು ದೂಷಿಸುತ್ತಾ, ಅಳುತ್ತಲೇ, ಕಿರುಚುತ್ತಲೇ ಹೇಳಿದರು.

''ನೋಡಮ್ಮ, ನೀವು ಸ್ವಲ್ಪ ಸಮಾಧಾನವಾಗಿ, ಅಳು ನಿಲ್ಲಿಸಿ, ಧ್ವನಿ ಕಮ್ಮಿ ಮಾಡಿ ನನಗೆ ವಿವರವಾಗಿ ಹೇಳಿದರೆ ಗೊತ್ತಾಗುತ್ತೆ...'' ಎಂದು ವಿಚಾರಿಸಿದೆ.

''ಸಾರ್ ನಮ್ಮ ಖಾತೆಯಿಂದ....'' ಎಂದು ಯಜಮಾನರು ಹೇಳುತ್ತಿದ್ದಂತೆ ಆಕೆ ''ನಾನು ಹೇಳ್ತೀನಿ ಸಾರ್....'' ಎಂದು ಗಂಡನನ್ನು ತಡೆದು ಬಡಬಡಿಸಿದರು.

''ಆಗಲಿ ನೀವೆ ಹೇಳಿಮ್ಮ..''

''50 ಸಾವಿರ ರೂಪಾಯಿ ತೆಗೆದುಕೊಳ್ಳೋಣ ಅಂತ ಬಂದರೆ ಇವತ್ತು ನಮ್ಮ ಖಾತೆಯಲ್ಲಿ ಹಣವಿಲ್ಲ ಅದನ್ನು ನಾವು ಬೇರೆಯಾರಿಗೊ ಚೆಕ್ ಕೊಟ್ಟಿದ್ದೇವೆ ಅವರು ಬೆಳಿಗ್ಗೆನೆ ತೆಗೆದುಕೊಂಡು ಹೋದರು ಅಂತ ನಿಮ್ಮ ಟೆಲರ್ ಹೇಳ್ತಾರೆ. ನಾನು ಯಾರಿಗೂ ಚೆಕ್ ಕೊಟ್ಟಿಲ್ಲ, ನಿನ್ನೆ ತಾನೇ ಖಾತೆಯಲ್ಲಿ ಹಣ ಇತ್ತು. ಈಗ ಹೇಗೆ ಮಾಯವಾಗುತ್ತೆ....'' ಎಂದಬ್ಬರಿಸಿದರು.

ವಿಷಯ ನಾನು ಊಹಿಸಿದಕ್ಕಿಂತ ಜಟಿಲವಾಗಿದೆ ಸಮಸ್ಯೆಯೆನಿಸಿತು. ಬೆಳಿಗ್ಗೆ ಅವರ ಖಾತೆಯಿಂದ ಪಾವತಿಯಾದ ಚೆಕ್‌ನ್ನು ತರಿಸಿದೆ. ''ನೋಡಿ ಈ ಚೆಕ್ ನಿಮ್ಮ ಖಾತೆದು ತಾನೆ?'' ಎಂದು ಕೇಳಿದ್ದಕ್ಕೆ ಗಂಡಸು ''ಹೌದು ಸಾರ್'' ಎಂದು ಒಪ್ಪಿಕೊಂಡ.

''ಇಲ್ಲಿ ಹಾಕಿರುವ ಸಹಿ ನಿಮ್ಮದೆ ತಾನೆ?'' ಎಂದು ಕೇಳಿದಾಗ ಹೌದೆಂದು ಆಗ ಗೋಣಾಡಿಸಿದಾಗ ನನಗೆ ಎಲ್ಲಿಲ್ಲದ ಧೈರ್ಯ ಬಂತು. ಚೆಕ್ಕನ್ನು ಸಹಿ ಮಾಡಿದ್ದು ತನ್ನ ಗಂಡನೇ ಎಂದು ಖಚಿತವಾದರೂ ಆ ಹೆಂಗಸು ''ಸಾರ್ ಮೋಸವಾಗಿದೆ ಸಾರ್, ಚೆಕ್ ಮೇಲೆ ಬರೆದ ಹೆಸರಾಗಲಿ, ಮೊಬಲಾಗಲಿ, ಡೇಟ್ ಆಗಲಿ ನಾವು ಬರೆದಿಲ್ಲ, ಇದು ಯಾವ ಕಾಲದ ಚೆಕ್ಕೋ...'' ಎಂದರು.

''ಅಂದ್ರೆ ನೀವು ಖಾಲಿ ಚೆಕ್‌ಗೆ ಸಹಿ ಹಾಕಿ ಎಲ್ಲೋ ಇಟ್ಟಿದ್ದೀರಿ ಅಂತಾಯ್ತು...''

''....ಆದರೆ ಚೆಕ್ ಪಾವತಿ ಮಾಡಬೇಕಾದರೆ ಇಷ್ಟು ಸಮಯದೊಳಗೆ ಎಂಬ ನಿಯಮವಿರುತ್ತೆ. ನೀವು ಯಾವುದೊ ಹಳೇ ಚೆಕ್‌ನ್ನು ಅದು ಯಾರದೊ ಬರಹದಲ್ಲಿಗೊ ಚೆಕ್‌ನ್ನು ಹೇಗ್ಸಾರ್ ಪೇ ಮಾಡ್ತಿರಾ?'' ಮತ್ತೆ ಜೋರು ಮಾಡಿದರು.

ನಾನು ಧ್ವನಿಯನ್ನು ಏರಿಸಲೇಬೇಕಾಯಿತು. ''ನೋಡಿಮ್ಮ ಚೆಕ್ ಯಾವ ಕಾಲದಲ್ಲಾದರೂ ನೀವು ತೆಗೆದುಕೊಂಡಿರಬಹುದು. ಅದರ ಮೇಲೆ ದಿನಾಂಕ ಹಾಕಿದರೆ ಮಾತ್ರ ನಾವು ಅದನ್ನು ಆರುತಿಂಗಳ ನಂತರ ಪೇ ಮಾಡುವ ಹಾಗಿಲ್ಲ, ಇನ್ನು ನಿಮ್ಮ ಸಹಿ ಇದ್ದರೆ ಸಾಕು ಅದು ನಿಮ್ಮ ಜವಾಬ್ದಾರಿ. ಖಾಲಿ ಚೆಕ್ಕನ್ನು ಯಾರು ಬೇಕಾದರೆ ತುಂಬಬಹುದು.

ಒಂದು ವೇಳೆ ಹಾಗೆ ತುಂಬುವಾಗ ಏನಾದರೂ ತಪ್ಪು ಮಾಡಿ ಅದನ್ನು ತಿದ್ದಿದ್ದರೆ ಮಾತ್ರ ನಾವು ಅದಕ್ಕೆ ಗ್ರಾಹಕರ ಸಹಿಯನ್ನು ಮತ್ತೆ ಕೇಳುತ್ತೇವೆ. ಇಲ್ಲಿ ಯಾವುದು ಆ ರೀತಿ ತಿದ್ದಿ ಬರೆದಿಲ್ಲವಲ್ಲ ನೋಡಿ. ಈ ಚೆಕ್‌ನ ಮೇಲೆ ನಿನ್ನೆಯ ದಿನಾಂಕವೇ ಇದೆ...''

''ಬಡಕೊಂಡೆ ಆ ಮುಂಡೆಗಂಡನಿಗೆ ಹಾಗೆಲ್ಲ ಬ್ಲಾಂಕ್ ಚೆಕ್ ಕೊಡಬೇಡಿ ಅಂತ, ಈಗ ಸರಿಯಾಗಿ ಸೇಡು ತೀರಿಸಿಕೊಂಡಿದ್ದಾನೆ. ಮಣ್ಣುಮುಕ್ಕಿ....'' ಅಂತಾ ಹೆಂಗಸು ತನ್ನ ಗಂಡನನ್ನು ಮೂದಲಿಸುತ್ತಿದ್ದಳು. ಏನೋ ನಿಗೂಢವಾಗಿದೆ ಎನಿಸಿ ''ನೋಡಿ, ನೀವು ಹೇಳ್ತಿರೋದು ನೋಡಿದರೆ ನಿಮಗೆ ತಿಳಿದವರಿಂದಲೇ ಈ ಮೋಸ ನಡೆದಿರೋ ಹಾಗಿದೆ. ಸ್ವಲ್ಪ ಡಿಟೈಲಾಗಿ ಹೇಳಿ, ನಾನೇನಾದ್ರು ಸಹಾಯ ಮಾಡ್ತೊಕ್ಕೆ ಆಗುತ್ತಾ ನೋಡ್ತೀನಿ'' ಅಂತ ಭರವಸೆ ನೀಡಿದೆ. ಆಗ ಯಜಮಾನ ಧೈರ್ಯದಿಂದ ಹೆಂಡತಿಯನ್ನು ಗಮನಿಸುತ್ತಾ, ''ಸ್ವಲ್ಪ ಬಾಯಿಮುಚ್ಚು ನಾನು ಮಾತಾಡ್ತೀನಿ'' ಅಂತ ಶುರು ಮಾಡಿದ.

''.... ಸಾರ್ ನನ್ನ ಭಾವಮೈದುನ ಅಂದ್ರೆ ಇವಳ ತಮ್ಮನ ಕೆಲಸವೇ ಸಾರ್ ಇದು. ಚೆಕ್‌ನ್ನು ಬರೆದವನು ಅವನೆ. ಅವನದೇ ಕೈ ಬರಹ, ಮೂರು ವರ್ಷದ ಹಿಂದೆ ಅವನು ನಮ್ಮನೆ ಕಟ್ಟಿಕೊಟ್ಟ ಸಾರ್. ಅವನೊಬ್ಬ ಕಂಟ್ರಾಕ್ಟರ್. ಸಂಬಂಧ ಚೆನ್ನಾಗಿಯೇ ಇತ್ತು ಸಾರ್. ಮನೆ ಕಟ್ಟುವಾಗ ಕೆಲವು ಖಾಲಿ ಚೆಕ್‌ಗಳನ್ನು ಅವನಿಗೆ ಕೊಡಲಾಗಿತ್ತು. ಆದರೆ ಅವನ ಬಳಿ ಒಂದು ಚೆಕ್ ಇಟ್ಟುಕೊಂಡಿದ್ದಾನೆಂದು ನಮಗೆ ಇವತ್ತೇ ಗೊತ್ತಾಗಿದ್ದು ಸಾರ್! ಮನೆ ಕಟ್ಟಿಕೊಟ್ಟಮೇಲೆ ನಮಗೆ ಸ್ವಲ್ಪ ಹಣದ ಕೊರತೆ ಬಂದಾಗ ನಾವು ನಮ್ಮ ಔಟ್‌ಹೌಸ್‌ನ್ನು ಮೂರು ವರ್ಷಕ್ಕೆ ಭೋಗ್ಯಕ್ಕೆ 50 ಸಾವಿರ ರೂಪಾಯಿಗೆ ಕೊಟ್ಟಿದ್ದೆವು. ಈಗ ಎರಡು ವರ್ಷದಿಂದ ನಮ್ಮ ಸಂಬಂಧ ಹದೆಗೆಟ್ಟಿತ್ತು. ಈಗ ಮೂರು ವರ್ಷದ ಅವಧಿ ಮುಗಿಯಿತು. ನಾವು ಅವನನ್ನು ಭೋಗ್ಯದಿಂದ ಬಿಡಿಸಲು ಹೇಗೊ ಐವತ್ತು ಸಾವಿರ ಹೊಂದಿಸಿದೆವು. ಅವನಿಗೆ ಮನೆ ಬಿಡಲು ಇಷ್ಟವಿಲ್ಲ. ಅದಕ್ಕೆ ತನ್ನಲ್ಲಿದ್ದ ಹಳೇ ಚೆಕ್‌ನ್ನು ಬಳಸಿ ಈ ರೀತಿ ಮಾಡಿದ್ದಾನೆ...''

''ಸ್ವಲ್ಪ ತಡಿರಿ, ನೀವು ನಿನ್ನೆ ಬ್ಯಾಂಕ್‌ಗೆ ಬಂದು ನೀವು ಇವತ್ತು ಐವತ್ತು ಸಾವಿರ ಹಣ ತೆಗೆದುಕೊಳ್ಳುವ ವಿಚಾರ ಹೇಳಿದ್ರಾ?''

''ಹೌದು ಮತ್ತೆ, ಇಲ್ಲದಿದ್ದರೆ ನೀವು 'ಮುನ್ಸೂಚನೆ' ಕೊಟ್ಟಿಲ್ಲ ಅಂತಿರಲ್ಲ.''

''ಹೌದು ಆದರೆ ಆ ವಿಷಯವನ್ನು ಇವತ್ತು ಮಾತನಾಡುತ್ತಿದ್ದರಲ್ಲ ಆ ತಾರಕಸ್ವರದಲ್ಲೇ ಹೇಳಿದ್ರಾ?'' ಕೇಳಿದೆ.

''ಇವಳದು ದೊಡ್ಡ ಗಂಟಲು ಅದೇ ಸಮಸ್ಯೆ, ಇವಳೇ ಬಂದಿದ್ದಳು'' ಎಂದ ಯಜಮಾನ.

''ನೀವು ಹೇಳಿದ್ದನ್ನು ಕೇಳಿಸಿಕೊಂಡು, ಬ್ಯಾಂಕ್ ತೆಗೆಯುತ್ತಿದ್ದಾಗಲೇ ಬಂದು ಹಣ ಪಡೆದಿದ್ದಾನೆ.''

''ಅದ್ಸರಿ ಅಷ್ಟೊಂದು ನಗದು ಕೊಡುವಾಗ ನೀವು ಎಚ್ಚರ ವಹಿಸಬೇಕಾಗಿತ್ತಲ್ಲವೆ?'' ಹೆಂಗಸು ಮತ್ತೆ ಪ್ರಶ್ನಿಸಿದಳು.

‘‘ಹೌದು ಆದರೆ ನಿಮ್ಮ ತಮ್ಮನಿಗೆ ಹಿಂದೆ ಬೇಕಾದಷ್ಟು ಸಾರಿ ಈ ರೀತಿ ಹಣ ಕೊಟ್ಟಿದೆ ಹಾಗೆ ಆತನ ಖಾತೆಯೂ ನಮ್ಮಲ್ಲಿರುವುದರಿಂದ ಹಣ ಕೊಟ್ಟಿದೆ. ನಮಗೇನು ಗೊತ್ತಾಗಬೇಕು ನಿಮ್ಮ ಕುಟುಂಬದ ಕಲಹಗಳು?’’

‘‘ಸಾರ್ ಹಾಗಾದ್ರೆ ನಮ್ಮ ದುಡ್ಡಿನ ಗತಿ?’’

‘‘ನಿಮ್ಮನೇಲಿ ದೊಡ್ಡವರು ಯಾರಾದರೂ ಇದ್ರೆ ಸಮಸ್ಯೆ ಬಗೆಹರಿಸಬಹುದು. ಇಲ್ಲದಿದ್ರೆ ನನ್ನ ಹತ್ತಿರ ಕರೆದುಕೊಂಡು ಬನ್ನಿ, ನಾನು ಬುದ್ಧಿ ಹೇಳ್ತೀನಿ.’’

‘‘ಇಲ್ಲಾ ಸಾರ್ ಅವನು ಯಾರ ಮಾತಿಗೂ ಬೆಲೆಕೊಡುವವನಲ್ಲ...’’

‘‘ನಿಮಗೆ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುವವರು ಯಾರಾದರೂ ನೆಂಟರು ಸ್ನೇಹಿತರು ಹಿತೈಷಿಗಳು ಇದ್ದಾರಾ?’’ ವಿಚಾರಿಸಿದೆ.

‘‘ಸಾರ್ ನಮಗೆ ಒಬ್ಬ D.S.P. ಫ್ಯಾಮಿಲಿ ಸ್ನೇಹಿತರಿದ್ದಾರೆ. ಅವರೂ ಇದೇ ಏರಿಯಾದಲ್ಲಿದ್ದಾರೆ.’’

‘‘ಹಾಗಾದರೆ ನಾಳೆ ಅವರನ್ನು ಪೊಲೀಸ್ ಯುನಿಫಾರಂನಲ್ಲೇ ನಮ್ಮ ಬ್ಯಾಂಕಿಗೆ ಹತ್ತು ನಿಮಿಷ ಬಂದು ಹೋಗಕ್ಕೆ ಹೇಳಿ. ಅವರ ಜೊತೆಯಲ್ಲಿ ನೀವ್ಯಾರೂ ಬರಬಾರದು. ನಿಮ್ಮ ಕೆಲಸ ಸಲೀಸಾಗುತ್ತೆ’’ ಎಂದೆ.

ಮರುದಿನ ಒಬ್ಬ ಪೋಲಿಸ್ ಅಧಿಕಾರಿ (D.S.P.) ನನ್ನ ಕ್ಯಾಬಿನ್‌ಗೆ ಬಂದರು. ಅವರನ್ನು ಅಗತ್ಯಕ್ಕಿಂತ ಹೆಚ್ಚಾಗಿ ಹತ್ತು ನಿಮಿಷ ಕೂಡಿಸಿಕೊಂಡೆ ವಿಷಯವನ್ನು ವಿವರಿಸಿ ‘‘ದಯವಿಟ್ಟು ನೀವು ನಾಳೆ ನಾಡಿದ್ದು ಹೀಗೆ ಯೂನಿಫಾರಂನಲ್ಲಿ ಬಂದು ಹೋಗಿ ಸಾಕು, ನಿಮ್ಮ ಸ್ನೇಹಿತರಿಗೆ ಅನುಕೂಲವಾಗುತ್ತೆ’’ ಎಂದೆ. ಪೊಲೀಸಿನವರು ಬ್ಯಾಂಕಿಗೆ ಬಂದು ಹೋಗುತ್ತಿರುವ ಸುದ್ದಿ ಆ ಪಾರ್ಟಿಗೆ ಮುಟ್ಟಿತು. ಸಾಯಂಕಾಲವಾಗುತ್ತಿದ್ದಂತೆ ಒಬ್ಬ ವೃದ್ಧರು ನನ್ನನ್ನು ನೋಡಲು ಬಂದರು. ಬರುತ್ತಿದ್ದಂತೆ ನನ್ನ ಕಾಲನ್ನು ಮುಟ್ಟುವುದಕ್ಕೆ ಮುಂದಾದರು. ‘‘ಛೇ, ನೀವು ದೊಡ್ಡವರು ಹೀಗೆ ಮಾಡಬಾರ್ದು....’’ ಎತ್ತಿ ಕುರ್ಚಿಯಲ್ಲಿ ಕೂಡಿಸಿದೆ.

‘‘ಸಾರ್ ನನ್ನ ಮಗನ ಮೇಲೆ ಪೊಲೀಸ್ ಕೇಸ್ ವಾಪಸ್ಸು ತೆಗೆದುಕೊಳ್ಳಿ ಹಣವನ್ನು ವಾಪಸ್ಸು ಮಾಡಿದ್ದೀವಿ.’’

‘‘ಅಂದ್ರೆ ಹಣ ದುರುಪಯೋಗ ಮಾಡಿಕೊಂಡಿರೋದು ನಿಮ್ಮ ಮಗ, ಮೋಸ ಆಗಿರೋದು ನಿಮ್ಮ ಮಗಳು ಅಳಿಯನಿಗೆ. ಇದರಲ್ಲಿ ನಾನೇನು ಮಾಡೊ ಹಾಗಿಲ್ಲ, ಇರಲಿ ಮೊದಲು ದುಡ್ಡು ಬಂದಿದೆ ಅಂತ ನಿಮ್ಮ ಮಗಳು ಅಳಿಯ ಬಂದು ನನಗೆ ಹೇಳಬೇಕು ಆಮೇಲೆ...’’

‘‘ಸಾರ್ ಈಗಾಗಲೇ ನಾನು ನನ್ನ ಮಗನಿಂದ 47 ಸಾವಿರ ಕೊಡಿಸಿದ್ದೇನೆ. ಮೂರು ಸಾವಿರಾನ ನನ್ನ ಖಾತೆಯಿಂದ ನಾಳೆ ಬೆಳಿಗ್ಗೆ ಕೊಡುತ್ತೇನೆ. ಇನ್ನು ಐದು ನಿಮಿಷಕ್ಕೆ ನನ್ನ ಮಗಳು ಅಳಿಯ ಬರ್ತಾರೆ. ಇದು ಸಂಸಾರಕ್ಕೆ ಸಂಬಂಧಪಟ್ಟಿದ್ದು, ನಾವೇ ಸರಿಪಡಿಸಿಕೊಳ್ತೀವಿ.

ಪೊಲೀಸ್ ಕೋರ್ಟು ಅಂತಾ ಏನೂ ಬೇಡ...'' ಮತ್ತೆ ಅಂಗಲಾಚಿಸುತ್ತಿದ್ದಂತೆ ಮೋಸಹೋದ ದಂಪತಿಗಳು ಹಾಜರಾಗಿ ''ಸಾರ್ ನಮ್ಮ ದುಡ್ಡು ಬಂದಿದೆ, ಮನೇನೂ ಮುಂದಿನ ವಾರ ಬಿಡೋದಕ್ಕೆ ರೆಡಿಯಾಗಿದ್ದಾನೆ. ಕೇಸ್ ಬುಕ್ ಮಾಡಬೇಡಿ'' ಎಂದರು.

''ಆಹಾ, ಎಷ್ಟು ಸುಲಭವಾಗಿ ನೀವುನೀವೆ ಬಗೆಹರಿಸಿಕೊಂಡುಬಿಟ್ರಿ ಸಮಸ್ಯೆನಾ. ನಿಮ್ಮಿಂದಾಗಿ ನಮ್ಮ ಸಮಯವನ್ನೆಲ್ಲಾ, ನೆಮ್ಮದಿಯನ್ನೆಲ್ಲಾ ಹಾಳು ಮಾಡಿದಿರಿ. ಪೋಲಿಸ್ ಕೇಸ್ ಹಾಕಿದ್ದಾಗಿದೆ, ಮೇಲಿನವರಿಗೆ ತಿಳಿಸಿದ್ದಾಗಿದೆ. ಅದನ್ನು ವಾಪಸ್ಸು ಪಡೆಯಲಾಗುವುದಿಲ್ಲ. ಆದರೆ ನಾನು ಅದರ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸೊಲ್ಲ. ನಾಳೆ ಬೆಳಿಗ್ಗೆ ನೀವೆಲ್ಲಾ ಬಂದು ನಿಮ್ಮ ಮನೆಯವರ ಆರು ಉಳಿತಾಯ ಖಾತೆಯನ್ನು ಕ್ಲೋಸ್ ಮಾಡಬೇಕು ನಿಮ್ಮ ತಮ್ಮನದು ಕೂಡ. ಖಾತೆ ಕ್ಲೋಸ್ ಮಾಡುವಾಗ ಬಳಕೆಯಾಗದ ಚೆಕ್‌ಗಳನ್ನು ವಾಪಸ್ಸು ಕೊಟ್ಟುಬಿಡಿ. ನಿಮಗೊಂದು ದೊಡ್ಡ ನಮಸ್ಕಾರ. ಈ ರೀತಿಯ ತರಲೆ ವ್ಯವಹಾರಗಳು ಬೇಡ'' ಎಂದೆ.

''ಏನ್ಸಾರ್, ಇನ್ಮುಂದೆ ಹೀಗೆ ಆಗದಿದ್ದ ಹಾಗೆ...''

''ಬೇಡ, ದಯವಿಟ್ಟು ನಿಮ್ಮ ಖಾತೆಗಳನ್ನು ಕ್ಲೋಸ್‌ಮಾಡಿ'' ಎಂದೆ.

ಪ್ರಕರಣ ಸುಖಾಂತ್ಯದಲ್ಲಿ ಕೊನೆಗೊಂಡರೂ ಪೋಲಿಸ್ ಭಯ ಸದಾಕಾಲದಲ್ಲೂ ಇರುವಂತೆ ನಾನೊಂದು ಸುಳ್ಳು ಹೇಳಿದ್ದೆ. ವಾಸ್ತವವಾಗಿ ಯಾವ ಪೋಲಿಸ್ ಕಂಪ್ಲೆಂಟ್ ನಾನು ಮಾಡಿರಲಿಲ್ಲ. ಪೊಲೀಸ್ ಅಧಿಕಾರಿಯೊಂದಿಗೆ ಸೇರಿ ನಾಟಕವಾಡಿದ್ದನಷ್ಟೆ. ಆದರೆ ಒಂದು ದಿನ ನನ್ನ ರೀಜನಲ್ ಮ್ಯಾನೇಜರ್ ಫೋನಾಯಿಸಿ ''ನಿಮ್ಮ ಖಾತೆಯಲ್ಲಿ ಏನೋ ಪೊಲೀಸ್ ಕೇಸ್ ಇತ್ತಂತೆ, ನಮಗೆ ವರದಿ ಮಾಡಲೇ ಇಲ್ಲವಲ್ಲ?'' ಎಂದು ಕೇಳಿದರು. ಸಿಬ್ಬಂದಿಯಾರೊ ವಿಷಯ ತಿಳಿಸಿದ್ದಾರೆ ಎಂದು ಸ್ಪಷ್ಟವಾಯಿತು. ನಡೆದ ವಿಚಾರವನ್ನು ಬಾಸ್‌ಗೆ ಹೇಳಿ ಸಮಸ್ಯೆ ಬಗೆಹರಿದಿದೆ ಎಂದಾಗ ಅವರ ಆಕ್ಷೇಪಣೆ ಏನು ಬರಲಿಲ್ಲ.

ರಿಟೈರ್ ಆದಮೇಲೆ ಆ ಶಾಖೆಯ ಬಡಾವಣೆಯಲ್ಲೆ ನಾನು ವಾಕಿಂಗ್ ಮಾಡುತ್ತಿದ್ದಾಗ ವೃದ್ಧ ದಂಪತಿಗಳು ''ನಮಸ್ಕಾರ್ ಸಾರ್'' ಅಂದಾಗ, ಅವರ ಗುರುತುಸಿಗದಿದ್ದರೂ ಅದನ್ನು ತೋರಿಸಿಕೊಳ್ಳದೆ ಪ್ರತಿ ನಮಸ್ಕಾರ ಅಂತ ಹೇಳೊದನ್ನು ನಾನು ರೂಢಿಮಾಡಿಕೊಂಡಿದ್ದೆ. ಆದರೆ ಆ ಜೋಡಿ ''ನೀವು ನಮಗೆ ಮಾಡಿದ ಉಪಕಾರ ಎಂದೂ ಮರೆಯೊಲ್ಲ, ನಿಮ್ಮ ಸಹಾಯವಿಲ್ಲದೆ ಇದ್ರೆ ನಮಗೆ 50 ಸಾವಿರ ರೂಪಾಯಿ ನಾಮ ಬೀಳ್ತಾ ಇತ್ತು...'' ಎಂದಾಗ ನಾನು ಫ್ಲಾಶ್‌ಬ್ಯಾಕ್‌ಗೆ ಹೋಗಬೇಕಾಯಿತು.

ಓದುಗರ ಗ್ರಹಚಾರ, ನಾನೇನು ಮಾಡೊಕ್ಕಾಗುತ್ತೆ, ನಾನು ಬರವಣಿಗೆಯಲ್ಲಿ ದಾಖಲಿಸದೆ ಇರಲು ಶಕ್ತನಾಗಲಿಲ್ಲ.

✵